

# ದೈವೀಕ ದಯೆ

ಸಾಮಾನ್ಯವಲ್ಲದ ದಯೆಯನ್ನು ನಿರೀಕ್ಷಿಸಿರಿ. ನೀವು ಏನು
ಸಂಭವಿಸಬೇಕೆಂದು ಜನರು ನಿರೀಕ್ಷಿಸುತ್ತಾರೋ ಅದಕ್ಕೆ
ವಿರುದ್ಧವಾದ ಕಾರ್ಯವನ್ನು ದೇವರು ಮಾಡುತ್ತಾನೆ.

**ಅಶೀಷ್ ರಾಯಚೂರ್**

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2024

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada—Divine Favor)

# ದೈವೀಕ ದಯೆ

ಸಾಮಾನ್ಯವಲ್ಲದ ದಯೆಯನ್ನು ನಿರೀಕ್ಷಿಸಿರಿ. ನೀವು ಏನು ಸಂಭವಿಸಬೇಕೆಂದು ಜನರು ನಿರೀಕ್ಷಿಸುತ್ತಾರೋ ಅದಕ್ಕೆ ವಿರುದ್ಧವಾದ ಕಾರ್ಯವನ್ನು ದೇವರು ಮಾಡುತ್ತಾನೆ.

# ಪರಿವಿಡಿ


| | | |
|---|---|---|
| 1. | ದೈವೀಕ ದಯೆ ಅಂದರೆ ಏನು? | 1 |
| 2. | ದೇವರ ದಯೆ ನಮ್ಮ ಮೇಲೆ ಇರುವಾಗ ಏನಾಗುತ್ತದೆ? | 9 |
| 3. | ದೇವರ ದಯೆ ನಮ್ಮ ಮೇಲೆ ಬರಲು ಕಾರಣ ಏನು? | 11 |
| 4. | ದೇವರ ದಯೆಯ ಪಾರುಪತ್ಯಗಾರಿಕೆ | 20 |

# 1
# ದೈವೀಕ ದಯೆ ಅಂದರೆ ಏನು?

ದೈವೀಕ ದಯೆಯು ದೇವರು ತನ್ನ ಜನರ ಮೇಲೆ ಸುರಿಸುವಂಥದ್ದಾಗಿದೆ. ಇದು ಆತನ ಆಶೀರ್ವಾದಗಳಲ್ಲಿ ಒಂದಾಗಿದ್ದು ಇದನ್ನು ನಮಗೆ ಅನುಗ್ರಹಿಸುತ್ತಾನೆ. ಸರಳವಾಗಿರುವ ಈ ಅಧ್ಯಯನದಲ್ಲಿ, ದೈವೀಕ ದಯೆ ಅಂದರೆ ಏನು, ಅದು ನಮ್ಮ ಜೀವಿತಗಳೊಳಗೆ ಏನನ್ನು ಬರಮಾಡುತ್ತದೆ, ಮತ್ತು ದೈವೀಕ ದಯೆಯನ್ನು ಅಂಗೀಕರಿಸಿಕೊಳ್ಳಲು ನಾವು ಏನು ಮಾಡಬೇಕು ಎಂಬದನ್ನು ಪರಿಶೋಧಿಸೋಣ.

- ದೈವೀಕ ದಯೆ ಅಂದರೆ ಏನು?
- ದೇವರ ದಯೆ ನಮ್ಮ ಮೇಲೆ ಬರುವಾಗ ಏನಾಗುತ್ತದೆ?
- ದೇವರ ದಯೆ ನಮ್ಮ ಮೇಲೆ ಬರಲು ಕಾರಣ ಏನು?

ದೈವೀಕ ದಯೆಯು ದೇವರ ದಾನವಾಗಿದ್ದು ಒಬ್ಬ ವ್ಯಕ್ತಿಗೆ ಅನುಗ್ರಹವಾಗುತ್ತದೆ ಮತ್ತು ಆ ವ್ಯಕ್ತಿಗೆ ಪ್ರಭಾವ, ಜನರು, ಸ್ಥಳಗಳು ಅಥವಾ ಕಾರ್ಯಗಳಿಗೆ ಪ್ರವೇಶ, ಅಸಾಧಾರಣವಾದ ಅವಕಾಶಗಳು, ಉನ್ನತ ಸ್ಥಾನ, ಮತ್ತು ದೈವೀಕ ಮಧ್ಯಸ್ಥಿಕೆಯನ್ನು ಕೊಡುತ್ತದೆ.

ದೇವರು ಪಕ್ಷಪಾತಿಯಲ್ಲ ಎಂಬದರ ಬಗ್ಗೆ ಸತ್ಯವೇದವು ಮಾತನಾಡುತ್ತದೆ (ರೋಮಾಪುರದವರಿಗೆ 2:11; ಅಪೊಸ್ತಲರ ಕೃತ್ಯಗಳು 10:34).

**ರೋಮಾಪುರದವರಿಗೆ 2:11**
**ದೇವರಿಗೆ ಪಕ್ಷಪಾತವಿಲ್ಲ.**

**ಕೀರ್ತನೆಗಳು 34:8**
**ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ;**
**ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು!**

**ಅಪೊಸ್ತಲರ ಕೃತ್ಯಗಳು 10:34**
**ಆಗ ಪೇತ್ರನು ಉಪದೇಶಮಾಡಲಾರಂಭಿಸಿ ಹೇಳಿದ್ದೇನಂದರೆ – ದೇವರು ಪಕ್ಷಪಾತಿಯಲ್ಲ.**

ದೇವರು ಪ್ರತಿಯೊಬ್ಬ ವ್ಯಕ್ತಿಯನ್ನು ಸಮಾನವಾಗಿ ಪ್ರೀತಿಸುತ್ತಾನೆ ಮತ್ತು ವ್ಯಕ್ತಿಗಳನ್ನು ಗೌರವಿಸುವವನಲ್ಲ. ಆದರೂ, ಮಾನವರೊಂದಿಗಿನ ತನ್ನ ಕಾರ್ಯಗಳಲ್ಲಿ, ದೇವರು ನಿರ್ದಿಷ್ಟವಾದ ಸಮಯದಲ್ಲಿ ಕೆಲವು ವ್ಯಕ್ತಿಗಳು ಅಥವಾ ಜನರ ಗುಂಪುಗಳ ಮೇಲೆ, ನಿರ್ದಿಷ್ಟವಾದ ಕಾಲಗಳಲ್ಲಿ, ಅಥವಾ ಅವರ ಜೀವಿತದ ಕ್ಷಣಗಳಲ್ಲಿ ದೈವೀಕ ದಯೆ ಬಿಡುಗಡೆ ಮಾಡುವದನ್ನು ನಾವು ನೋಡುತ್ತೇವೆ. ಮತ್ತು ಈ ವಿಷಯದಲ್ಲಿಯೇ ನಾನು ನಿಮ್ಮನ್ನು ಜಾಗೃತಗೊಳಿಸಲು ಬಯಸುತ್ತೇನೆ ಆದ್ದರಿಂದ ನಾವು ಸಹ ದೇವರಿಂದ ದೈವೀಕ ದಯೆ ಅಂಗೀಕರಿಸಿಕೊಳ್ಳುವದನ್ನು ನಿರೀಕ್ಷಿಸಬಹುದು.

## ದೇವರ ದಯೆ ಜನರ ಮೇಲೆ ಬಂದ ಉದಾಹರಣೆಗಳು

### *ನೆಹೆಮಿಯ*

ನೆಹೆಮಿಯನು ದೇವರ ದಯೆಯನ್ನು ಅಂಗೀಕರಿಸಿಕೊಂಡ ವ್ಯಕ್ತಿಗಳಲ್ಲಿ ಒಂದು ಉದಾಹರಣೆಯಾಗಿದ್ದಾನೆ. ಸತ್ಯವೇದವು ಯೆರೂಸಲೇಮಿನ ಮೇಲೆ ದಾಳಿ ಮಾಡಿ ಅದನ್ನು ಜಯಿಸಿದ, ಬಾಬೆಲಿನ ಅರಸನಾದ, ನೆಬೂಕದ್ನೇಚ್ಚರನ ಕಥೆಯನ್ನು ತಿಳಿಸುತ್ತದೆ (ನೆಹೆಮಿಯ 1,2). ಅವನು ದೇವಾಲಯವನ್ನು ಮತ್ತು ಪಟ್ಟಣದ ಗೋಡೆಗಳನ್ನು ಕೆಡವಿದನು ಹಾಗೂ ಬಹಳಷ್ಟು ಜನರನ್ನು ಬಾಬೆಲಿಗೆ ಸೆರೆಯಾಗಿ ಕರೆದುಕೊಂಡು ಹೋದನು. ಪರಿವರ್ತನೆಗಳು ಉಂಟಾದವು. ಪಾರಸಿಯ ಸಾಮ್ರಾಜ್ಯವು ಬಾಬೆಲ್ ಸಾಮ್ರಾಜ್ಯವನ್ನು ಸದೆಬಡಿಯಿತು. ಆ ಸಮಯದಲ್ಲಿ ದೇವಜನರು ಸೆರೆಯಲ್ಲಿದ್ದರು ಮತ್ತು ನೆಹೆಮಿಯನು ಅರಮನೆಯಲ್ಲಿ ಅರಸನ ಪಾನಸೇವಕನಾಗಿ ಕೆಲಸ ಮಾಡುತ್ತಿದ್ದನು. ಅರಸನು ಕುಡಿಯಲು ಏನು ಕೇಳುತ್ತಾನೋ ಅದನ್ನು ಕೊಡುವ ಕೆಲಸ ಮಾಡುತ್ತಿದ್ದನು. ಅರಮನೆಯಲ್ಲಿದ್ದಾಗ, ಯೆರೂಸಲೇಮಿನಲ್ಲಿ ಏನಾಗುತ್ತಿದೆ ಎಂಬ ಸುದ್ಧಿಯು ನೆಹೆಮಿಯನಿಗೆ ಗೊತ್ತಾಯಿತು. ಅವನ ಹೃದಯವು ಮರುಗಿತು, ಮತ್ತು ನಿಜವಾಗಿಯೂ ಯೆರೂಸಲೇಮಿನ ವಿಷಯವಾಗಿ ಏನಾದರು ಮಾಡಬೇಕು ಎಂಬದಾಗಿ ಅವನಿಗೆ ಅನ್ನಿಸಿತು. ಅವನು ತನ್ನಲ್ಲಿಯೇ, “ನಾನು ಹಿಂದಿರುಗಿ ಹೋಗಬೇಕು ಮತ್ತು ಯೆರೂಸಲೇಮಿನ ಗೋಡೆಯನ್ನು ಮತ್ತೆ ಕಟ್ಟಿಸಬೇಕು”

ಅಂದುಕೊಂಡು, ಪ್ರಾರ್ಥನೆ ಮಾಡಲು ಪ್ರಾರಂಭಿಸಿದನು.

**ನೆಹೆಮಿಯ 1:11**

**ಸ್ವಾಮಿ, ಕೃಪೆಮಾಡು; ನಿನ್ನ ಸೇವಕನಾದ ನನ್ನ ಪ್ರಾರ್ಥನೆಗೂ ನಿನ್ನ ನಾಮಸ್ಮರಣೆಯಲ್ಲಿ ಆನಂದಿಸುವ ನಿನ್ನ ಭಕ್ತರ ಪ್ರಾರ್ಥನೆಗೂ ಕಿವಿಗೊಡು. ನಿನ್ನ ಸೇವಕನು ಈಹೊತ್ತು ಈ ಮನುಷ್ಯನ ದಯೆಗೆ ಪಾತ್ರನಾಗಿ ಕೃತಾರ್ಥನಾಗುವಂತೆ ಅನುಗ್ರಹಿಸಬೇಕು ಎಂದು ಪ್ರಾರ್ಥಿಸಿದೆನು. ನಾನು ಅರಸನ ಪಾನಸೇವಕನಾಗಿದ್ದೆನು.**

ಹೀಗೆ, ನೆಹೆಮಿಯನು ಪ್ರಾರ್ಥನೆ ಮಾಡಿದನು ಮತ್ತು ಅರಸನ ದೃಷ್ಟಿಯಲಿ ದಯೆ ದೊರಕುವಂತೆ ಅನುಗ್ರಹಿಸ ಬೇಕೆಂದು ಬೇಡಿಕೊಂಡನು. ಎರಡು ದಿನಗಳ ನಂತರ, ನೆಹೆಮಿಯನು ಅರಮನೆಗೆ ಹೋದನು.

**ನೆಹೆಮಿಯ 2:1-8**

**1ಅರಸನಾದ ಅರ್ತಷಸ್ತನ ಇಪ್ಪತ್ತನೆಯ ವರುಷದ ಚೈತ್ರಮಾಸದಲ್ಲಿ ಅರಸನು ದ್ರಾಕ್ಷಾರಸಪಾನಮಾಡುವ ಹೊತ್ತಿನಲ್ಲಿ ನಾನು ದ್ರಾಕ್ಷಾರಸವನ್ನು ತಂದು ಅವನಿಗೆ ಕೊಟ್ಟೆನು. ನಾನು ಅವನ ಸನ್ನಿಧಿಯಲ್ಲಿ ಹಿಂದೆ ಎಂದೂ ಖಿನ್ನನಾಗಿರಲಿಲ್ಲ.**

**2ಅರಸನು ನನಗೆ – ನೀನು ಕಳೆಗುಂದಿದವನಾಗಿ ಕಾಣುವದೇಕೆ? ನಿನಗೆ ದೇಹ ಆಲಸ್ಯವಿಲ್ಲವಲ್ಲಾ; ಇದಕ್ಕೆ ಮನೋವೇದನೆಯೇ ಹೊರತು ಬೇರೇನೂ ಕಾರಣವಲ್ಲ ಎಂದು ಹೇಳಲು ನನಗೆ ಮಹಾಭೀತಿಯುಂಟಾಯಿತು.**

**3ನಾನು ಅರಸನಿಗೆ – ಅರಸನು ಚಿರಂಜೀವಿಯಾಗಿರಲಿ. ನನ್ನ ಪೂರ್ವಿಕರ ಸಮಾಧಿಗಳಿರುವ ಪಟ್ಟಣವು ಹಾಳಾಗಿ ಅದರ ಬಾಗಿಲುಗಳು ಬೆಂಕಿಯಿಂದ ಸುಟ್ಟು ಹೋಗಿವೆ; ಹೀಗಿರುವಲ್ಲಿ ನನ್ನ ಮುಖವು ಕಳೆಗುಂದದೆ ಇರುವದು ಹೇಗೆ ಎಂದು ಹೇಳಿದೆನು.**

**4ಆಗ ಅರಸನು ನನ್ನನ್ನು – ನಿನ್ನ ಅಪೇಕ್ಷೆಯೇನು ಎಂದು ಕೇಳಿದನು. ನಾನು ಪರಲೋಕದ ದೇವರನ್ನು ಪ್ರಾರ್ಥಿಸಿ ಅರಸನಿಗೆ – ರಾಜರ ಚಿತ್ತವಿರುವದಾದರೆ ಮತ್ತು**

**5ತಮ್ಮ ಸೇವಕನು ತಮ್ಮ ದೃಷ್ಟಿಯಲ್ಲಿ ದಯೆಗೆ ಪಾತ್ರನಾಗಿದ್ದರೆ ನನ್ನ ಪಿತೃಗಳ ಸಮಾಧಿಗಳಿರುವ ಪಟ್ಟಣವನ್ನು ತಿರಿಗಿ ಕಟ್ಟುವದಕ್ಕೋಸ್ಕರ ಯೆಹೂದದೇಶಕ್ಕೆ ಹೋಗಲು ನನಗೆ ಅಪ್ಪಣೆಯಾಗಬೇಕು ಎಂದು ಹೇಳಿದೆನು.**

**6ರಾಣಿಯು ಅರಸನ ಹತ್ತಿರದಲ್ಲೇ ಕೂತುಕೊಂಡಿದ್ದಳು. ಅರಸನು – ಪ್ರಯಾಣಕ್ಕೆ ನಿನಗೆಷ್ಟು ಕಾಲಬೇಕು? ಯಾವಾಗ ಹಿಂದಿರುಗುವಿ ಎಂದು ವಿಚಾರಿಸಿದಾಗ ನಾನು ಕಾಲವನ್ನು ಸೂಚಿಸಲು ಅವನು ಒಪ್ಪಿಕೊಂಡು ಅಪ್ಪಣೆಕೊಟ್ಟನು.**

**7ತರುವಾಯ ನಾನು ಅರಸನಿಗೆ – ಹೊಳೆಯಾಚೆಯ ದೇಶಾಧಿಪತಿಗಳು ತಮ್ಮ ಪ್ರಾಂತಗಳಲ್ಲಿ ಹಾದು ಯೆಹೂದ ಸೀಮೆಗೆ ಹೋಗುವದಕ್ಕೆ ನನಗೆ ಅಪ್ಪಣೆಕೊಡುವ ಹಾಗೂ**

**8ರಾಜವನಪಾಲಕನಾದ ಆಸಾಫನು ದೇವಾಲಯದ ಕೋಟೆಯ ಬಾಗಿಲುಗಳು, ಪಟ್ಟಣದ ಪೌಳಿಗೋಡೆ, ನಾನು ಸೇರುವ ಮನೆ ಇವುಗಳಿಗೆ ಬೇಕಾಗುವ ತೊಲೆಗಳಿಗಾಗಿ ಮರಗಳನ್ನು ಕೊಡುವ ಹಾಗೂ ರಾಜರು ನನ್ನ ಕೈಯಲ್ಲಿ ಪತ್ರಗಳನ್ನು ದಯಮಾಡಬೇಕು ಎಂದು ಬಿನ್ನವಿಸಲು ನನ್ನ ದೇವರ ಕೃಪಾಹಸ್ತಪಾಲನೆ ನನಗಿದ್ದದ್ದರಿಂದ ಅರಸನು ಅವುಗಳನ್ನು ನನಗೆ ಕೊಟ್ಟನು.**

ಅರಸನು ನೆಹೆಮಿಯನಿಗೆ ಏನು ಕೇಳಿದನು ಎಂಬದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿರಿ. ಅವನು ಮೂಲಭೂತವಾಗಿ ಅರಸನಿಗೆ ಹೇಳಿದ್ದೇನೆಂದರೆ ಅವನು ಅರಸನ ವೈರಿಗಳ ಬಳಿಗೆ ಹಿಂದಿರುಗಿ ಹೋಗಬೇಕು ಮತ್ತು ಅರಸನಿಗೆ ವಿರುದ್ಧವಾಗಿ ತಮ್ಮನ್ನು ಸಂರಕ್ಷಿಸಿಕೊಳ್ಳಲು ಅವರು ಬಲಗೊಳ್ಳಲು ಸಹಾಯಮಾಡಬೇಕು ಯಾಕಂದರೆ, ಆಗಿನ ದಿನಗಳಲ್ಲಿ, ಪಟ್ಟಣದ ಗೋಡೆಗಳು ಸಂರಕ್ಷಣೆಯ ಪ್ರಾಥಮಿಕ ಯಂತ್ರದ ರಚನೆಯಲ್ಲಿ ಒಂದಾಗಿತ್ತು. ಒಂದುವೇಳೆ ಅವರು ಬಲವಾದ ಗೋಡೆಗಳನ್ನು ಕಟ್ಟಿದರೆ, ಅವರು ತಮ್ಮನ್ನು ಅರಸನಿಗೆ ವಿರುದ್ಧವಾಗಿ ಸಂರಕ್ಷಿಸಿಕೊಳ್ಳಬಹುದಾಗಿತ್ತು. ಇದು ನೆಹೆಮಿಯನಿಂದಾದ ಅತಿರೇಕದ ಮನವಿಯಾಗಿದೆ ಆದರೂ, ಅರಸನು ಅವನಿಗೆ ಅವೆಲ್ಲವನ್ನು ಅನುಗ್ರಹಿಸಿದನು. ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದದ್ದು, ನೆಹೆಮಿಯನು ದೊಡ್ಡ ರಾಜಕಾರಣಿ ಅಥವಾ ಪ್ರಭಾವಿ ವ್ಯಕ್ತಿಯಾಗಿರಲಿಲ್ಲ ಬದಲಾಗಿ ಅರಮನೆಯಲ್ಲಿ ಅರಸನ ಸೇವೆಮಾಡುತ್ತಿದ್ದ ಸಾಧಾರಣ ಸೇವಕನಾಗಿದ್ದನು. ನೆಹೆಮಿಯನು ಇದನ್ನು ಸಂಕ್ಷಿಪ್ತಗೊಳಿಸಿದ್ದಾನೆ, *"ನನ್ನ ದೇವರ ಹಸ್ತಪಾಲನೆ ನನಗಿದ್ದದ್ದರಿಂದ ಅರಸನು ಅವುಗಳನ್ನು ನನಗೆ ಕೊಟ್ಟನು"* (ನೆಹೆಮಿಯ 2:8). ದೇವರ ಹಸ್ತವು ನನಗಿದ್ದದ್ದರಿಂದ ಅರಸನು ನನ್ನ ಎಲ್ಲಾ ಮನವಿಗಳನ್ನು ಅನುಗ್ರಹಿಸಿದನು ಎಂಬದಾಗಿ ನೆಹೆಮಿಯನು ಪ್ರಕಟಿಸಿದನು. ಇದಲ್ಲದೆ, ನೆಹೆಮಿಯನು ಯೆರೂಸಲೇಮಿಗೆ ಹಿಂದಿರುಗಿದನು ಮತ್ತು ನಾನು ಜನರಿಗೆ ನಿಮ್ಮ ದುಸ್ಥಿತಿಯನ್ನು ಮತ್ತು ಯೆರೂಸಲೇಮ್ ಪಟ್ಟಣವು ಹೀಗೆಹಾಳುಬಿದ್ದಿರುವದನ್ನು ನೋಡಿರಿ ಎಂದು ಹೇಳಿದನು.

**ನೆಹೆಮಿಯ 2:18**

**ಇದಲ್ಲದೆ ನನ್ನ ದೇವರ ಕೃಪಾಹಸ್ತವು ನನ್ನನ್ನು ಪಾಲಿಸಿದ್ದನ್ನೂ ಅರಸನು ನನಗೆ ಹೇಳಿದ್ದನ್ನೂ ಅವರಿಗೆ ವಿವರಿಸಿದೆನು. ಆಗ ಅವರು – ಬನ್ನಿರಿ, ಕಟ್ಟೋಣ ಎಂದು ಹೇಳಿ ಆ ಒಳ್ಳೇ ಕೆಲಸಕ್ಕೆ ಕೈಹಾಕಲು ಧೈರ್ಯಗೊಂಡರು.**

ನೆಹೆಮಿಯನು ಈ ರೀತಿಯಾಗಿ ದೇವರ ದಯೆಯನ್ನು ಅನುಭವಿಸಿದ್ದು ಮಾತ್ರವಲ್ಲ ಬದಲಾಗಿ ಆ ದಯೆಯ ವಿಷಯವಾಗಿ ಇತರೆ ಜನರೆದುರು ಸಹ ಸಾಕ್ಷಿ ಹೇಳಿದನು. ಆದ್ದರಿಂದ, ಏನಾಯಿತೆಂದರೆ ನೆಹೆಮಿಯನ ಮೇಲಿದ್ದ ದೇವರ ದಯೆಯು ಜನರನ್ನು ಅವನ ಕಡೆಗೆ ಆಕರ್ಷಿಸಿತು. ಬೇರೆಯವರು ಸಹ ನೆಹೆಮಿಯನೊಂದಿಗೆ ಸೇರಿಕೊಳ್ಳಲು ಮತ್ತು ಆತನ ನಿಯೋಗದಲ್ಲಿ ಭಾಗಿಯಾಗಲು ಬಯಸಿದರು! ದೇವರ ದಯೆಯು ಇಂದು ನನಗೂ ಮತ್ತು

ನಿಮಗೂ ಇದನ್ನೇ ಮಾಡುತ್ತದೆ!

ನೆಹೆಮಿಯನು ದೇವರ ದಯೆಯುಳ್ಳವನಾಗಿ ಜೀವಿಸಿದನು ಮತ್ತು ಅದು ಇತರೆ ಜನರ ಹೃದಯಗಳಲ್ಲಿ ಬಹಳ ಧೈರ್ಯವನ್ನುಂಟುಮಾಡಿದ್ದರಿಂದ ವಿರೋಧವು ಎದುರಾದಾಗ, ಅವರೆಲ್ಲರೂ *"ಪರಲೋಕದೇವರು ನಮಗೆ ಸಾಫಲ್ಯವನ್ನು ಅನುಗ್ರಹಿಸುವನು. ಆದದರಿಂದ ಆತನ ಸೇವಕರಾದ ನಾವು ಕಟ್ಟುವದಕ್ಕೆ ಮನಸ್ಸು ಮಾಡಿದ್ದೇವೆ..."* (ನೆಹೆಮಿಯ 2:20)ಎಂದು ಹೇಳುತ್ತಾ ವಿರೋಧಕ್ಕೆ ಪ್ರತಿಕ್ರಿಯಿಸಿದರು. ಹೀಗೆ, ಅವರು ದೈವೀಕ ದಯೆಯ ಕಾಲದಲ್ಲಿರುವದು ಅವರಿಗೆ ಗೊತ್ತಾಯಿತು ಮತ್ತು ದೇವರು ಅವರ ಮಧ್ಯದಲ್ಲಿ ಏನು ಮಾಡುತ್ತಿದ್ದಾನೆ ಎಂಬದನ್ನು ಅರಿತುಕೊಂಡರು. ದೇವರ ಕೃಪಾಹಸ್ತವು ಅವರ ಮೇಲಿದೆ ಎಂದು ಅವರು ನಂಬಿದರು, ಮತ್ತು ಜನರು ಏನೇ ಹೇಳಿದರೂ ಚಿಂತಿಸದೆ ಕಟ್ಟುವದಕ್ಕೆ ಮನಸ್ಸು ಮಾಡಿದರು.

## *ಯೋಸೇಫ*

ಆದಿಕಾಂಡ 39ನೇ ಅಧ್ಯಾಯವು ಯೋಸೇಫನ ಅಣ್ಣಂದಿರು ಅವನನ್ನು ಐಗುಪ್ತ ದೇಶಕ್ಕೆ ದಾಸನಾಗಿ ಮಾರಿದ್ದನ್ನು ತಿಳಿಸುತ್ತದೆ. ಅಲ್ಲಿ, ಅವನು ಪೋಟಿಫ಼ರನ ಮನೆಯಲ್ಲಿ ಕೆಲಸ ಮಾಡುತ್ತಿದ್ದನು ಮತ್ತು ನಂತರದಲ್ಲಿ ಅವನನ್ನು ಸೆರೆಮನೆಗೆ ಹಾಕಿದರು.

**ಆದಿಕಾಂಡ 39:21-23**

**21ಆದರೂ ಯೆಹೋವನು ಯೋಸೇಫನ ಸಂಗಡ ಇದ್ದು ಅವನ ಮೇಲೆ ಕೃಪೆಯನ್ನಿಟ್ಟು ಅವನಿಗೆ ಸೆರೆಯಜಮಾನನ ಬಳಿಯಲ್ಲಿ ದಯೆದೊರಕುವಂತೆ ಮಾಡಿದನು.**

**22ಸೆರೆಮನೆಯ ಯಜಮಾನನು ಸೆರೆಯಲ್ಲಿದ್ದವರೆಲ್ಲರನ್ನೂ ಯೋಸೇಫನ ವಶಕ್ಕೆ ಕೊಟ್ಟುಬಿಟ್ಟನು. ಅಲ್ಲಿ ಮಾಡಬೇಕಾದದ್ದನ್ನೆಲ್ಲಾ ಯೋಸೇಫನೇ ಮಾಡಿಸಿದನು.**

**23ಯೆಹೋವನು ಅವನ ಸಂಗಡ ಇದ್ದು ಅವನು ನಡಿಸಿದ್ದೆಲ್ಲವನ್ನು ಕೈಗೂಡಿಸಿದ್ದರಿಂದ ಅವನ ವಶದಲ್ಲಿದ್ದ ಯಾವದೊಂದರ ವಿಷಯದಲ್ಲಿಯೂ ಸೆರೆಮನೆಯ ಯಜಮಾನನು ಏನೂ ಚಿಂತಿಸಲಿಲ್ಲ.**

ಹೀಗೆ, ಸೆರೆಮನೆಯಲ್ಲಿಯೂ, ಸೆರೆಮನೆಯ ಯಜಮಾನನು ಯೋಸೇಫನಿಗೆ ಮೇಲ್ವಿಚಾರಕನಾಗಿರುವಂತೆ ಹೇಳಿದನು. ಇದು ದೈವೀಕ ದಯೆಯಾಗಿದೆ. ಯೋಸೇಫನು ಸೆರೆಯಿಂದ ಓಡಿಹೋಗಬಹುದು ಮತ್ತು ಇತರೆ ಖೈದಿಗಳನ್ನು ಹೊರಗೆ ಕಳುಹಿಸಬಹುದು ಎಂಬದಾಗಿ ಸೆರೆಮನೆಯ

ಯಜಮಾನನು ಒಮ್ಮೆಯೂ ಯೋಚಿಸಲಿಲ್ಲ. ಸೆರೆಯವನು ಸೆರೆಮನೆಯಲ್ಲಿ ತಾನಿರುವ ಕೋಣೆಯ ಮೇಲ್ವಿಚಾಕರನಾಗಿರುವದನ್ನು ಊಹಿಸಿಕೊಳ್ಳಿರಿ!

**ಅಪೊಸ್ತಲರ ಕೃತ್ಯಗಳು 7:9,10**
**9ಮೂಲಪಿತೃಗಳು ಹೊಟ್ಟೇಕಿಚ್ಚಿನಿಂದ ಯೋಸೇಫನನ್ನು ಐಗುಪ್ತದೇಶಕ್ಕೆ ಮಾರಿಬಿಟ್ಟರು.**
**10ಅಲ್ಲಿ ದೇವರು ಅವನ ಸಂಗಡ ಇದ್ದು ಅವನಿಗೆ ಬಂದ ಎಲ್ಲಾ ಸಂಕಟಗಳಿಂದ ಅವನನ್ನು ಬಿಡಿಸಿ ಐಗುಪ್ತದೇಶದ ಅರಸನಾದ ಫರೋಹನ ಸಮ್ಮುಖದಲ್ಲಿ ದಯಾಪಾತ್ರನೂ ಜ್ಞಾನವುಳ್ಳವನೂ ಆಗಿರುವಂತೆ ಅನುಗ್ರಹಿಸಿದನು. ಫರೋಹನು ಅವನನ್ನು ಐಗುಪ್ತದೇಶದ ಮೇಲೆಯೂ ತನ್ನ ಎಲ್ಲಾ ಮನೆಯ ಮೇಲೆಯೂ ಅಧಿಕಾರಿಯಾಗಿ ಇಟ್ಟನು.**

ದೇವರು ಯೋಸೇಫನಿಗೆ ದಯೆಯನ್ನು ಅನುಗ್ರಹಿಸಿದನು ಮತ್ತು ಅವನು ರಾತ್ರಿ ಬೆಳಗಾಗುವದರೊಳಗೆ, ಸೆರೆಯವನಾಗಿದ್ದವನು ಐಗುಪ್ತ ದೇಶದ ಪ್ರಧಾನ ಮಂತ್ರಿಯಾದನು. ದೇವರ ದಯೆ ನಮ್ಮ ಜೀವಿತಗಳಲ್ಲಿ ಇದನ್ನೇ ಮಾಡುತ್ತದೆ. ಒಂದೇ ಕ್ಷಣದಲ್ಲಿ, ಎಲ್ಲವೂ ಬದಲಾಗುತ್ತದೆ.

## *ಐಗುಪ್ತದೇಶದಲ್ಲಿ ಇಸ್ರಾಯೇಲ್ ಜನರು*

ಇಸ್ರಾಯೇಲ್ ಜನರು ಐಗುಪ್ತ ದೇಶದಲ್ಲಿ 400 ವರ್ಷಗಳು ದಾಸರಾಗಿದ್ದರು. ದೇವರು ಮೋಶೆಯೊಂದಿಗೆ ಅವನ ಕಾರ್ಯದ ಪ್ರಾರಂಭದಲ್ಲಿ ಮಾತನಾಡುತ್ತಾ ಹೇಳಿದ್ದೇನೆಂದರೆ, *"ಅದಲ್ಲದೆ ಈ ಜನ್ನ ಜನರಿಗೆ ಐಗುಪ್ತ್ಯರ ದಯೆ ದೊರಕುವಂತೆ ಮಾಡುವೆನು; ಆದದರಿಂದ ನೀವು ಹೊರಡುವಾಗ ಬರಿಗೈಲಿ ಹೋಗುವದಿಲ್ಲ. ನಿಮ್ಮಲ್ಲಿ ಪ್ರತಿ ಸ್ತ್ರೀಯು ನೆರೇ ಹೆಂಗಸರಿಂದಲೂ ನಿಮ್ಮ ಮನೆಯಲ್ಲಿ ಇಳುಕೊಂಡ ಹೆಂಗಸರಿಂದಲೂ ಬೆಳ್ಳಿ ಬಂಗಾರದ ಒಡವೆಗಳನ್ನೂ ಬಟ್ಟೆಗಳನ್ನೂ ಕೇಳಿಕೊಳ್ಳಲಿ. ನೀವು ಅವುಗಳನ್ನು ನಿಮ್ಮ ಗಂಡು ಹೆಣ್ಣು ಮಕ್ಕಳಿಗೆ ಇಡಿರಿ; ಇದರಿಂದ ಐಗುಪ್ತ್ಯರನ್ನು ಸೂರೆ ಮಾಡುವಿರಿ ಅಂದನು"* (ವಿಮೋಚನಕಾಂಡ 3:21,22). ಐಗುಪ್ತ್ಯರ ದೃಷ್ಟಿಯಲ್ಲಿ–ಇಷ್ಟೊಂದು ವರ್ಷ ಅವರನ್ನು ದಾಸತ್ವದಲ್ಲಿ ಇರಿಸಿಕೊಂಡಿದ್ದವರ—ದೃಷ್ಟಿಯಲ್ಲಿ ಇಸ್ರಾಯೇಲ್ ಜನರಿಗೆ ದಯೆ ದೊರಕುವಂತೆ ಮಾಡುವದಾಗಿ ದೇವರು ಹೇಳಿದನು. ಈ ಜನರನ್ನು ಐಗುಪ್ತ ದೇಶದಿಂದ ಹೊರಗೆ ಕರೆದುಕೊಂಡು ಬರುವ ಸಮಯ ಬರುವಾಗ, ಮೋಶೆ ಅವರನ್ನು ವಾಗ್ದಾನದ ದೇಶದೊಳಗೆ ಕರೆದುಕೊಂಡು ಹೋಗುವನು ಎಂಬದಾಗಿ ದೇವರು ಹೇಳಿದನು. ದೇವರು ಮೋಶೆಗೆ ಇದನ್ನು ಸ್ಪಷ್ಟವಾಗಿ ಹೇಳಿದನು ಯಾಕಂದರೆ ಅವರ ಮೇಲೆ ಆತನ ದಯೆ ಇತ್ತು,

ಇಸ್ರಾಯೇಲ್ಯರು ಐಗುಪ್ತದೇಶದಿಂದ ಬರಿಗೈಲಿ ಹೋಗುವದಿಲ್ಲ.

**ವಿಮೋಚನಕಾಂಡ 11:3**

**ಯೆಹೋವನು ಇಸ್ರಾಯೇಲ್ಯರ ಮೇಲೆ ಐಗುಪ್ತ್ಯರಲ್ಲಿ ದಯೆಯನ್ನು ಹುಟ್ಟಿಸಿದನು. ಇದಲ್ಲದೆ ಐಗುಪ್ತದೇಶದಲ್ಲಿ ಫರೋಹನ ಪ್ರಜಾಪರಿವಾರದವರು ಆ ಮೋಶೆಯನ್ನು ಮಹಾಪುರುಷನೆಂದು ತಿಳಿದುಕೊಂಡರು.**

ತಕ್ಷಣ, ಐಗುಪ್ತ್ಯರ ಅಭಿಪ್ರಾಯಗಳು, ದೃಷ್ಟಿಕೋನಗಳು, ಮತ್ತು ಇಸ್ರಾಯೇಲ್ಯರಿಗೆ ಅವರು ಏನು ಮಾಡಬೇಕೆಂಬದಾಗಿ ಅಂದುಕೊಂಡಿದ್ದರು ಎಲ್ಲವೂ ಬದಲಾಯಿತು. ಕರ್ತನು ಸರಳವಾಗಿ ಐಗುಪ್ತ್ಯರ ಎದುರಿನಲ್ಲಿ ಇಸ್ರಾಯೇಲ್ಯರಿಗೆ ದಯೆ ದೊರಕುವಂತೆ ಮಾಡಿದನು. ಎಲ್ಲವೂ ಬದಲಾಯಿತು!

**ವಿಮೋಚನಕಾಂಡ 12:35-37**

**35ಇಸ್ರಾಯೇಲ್ಯರು ಮೋಶೆಯ ಮಾತಿನ ಮೇರೆಗೆ ಐಗುಪ್ತ್ಯರಿಂದ ಬೆಳ್ಳಿಬಂಗಾರದ ಒಡವೆಗಳನ್ನೂ ಬಟ್ಟೆಗಳನ್ನೂ ಕೇಳಿಕೊಂಡರು.**
**36ಯೆಹೋವನು ಅವರ ಮೇಲೆ ಐಗುಪ್ತ್ಯರಲ್ಲಿ ದಯೆಯನ್ನು ಹುಟ್ಟಿಸಿದ್ದರಿಂದ ಅವರು ಕೇಳಿಕೊಂಡದ್ದನ್ನು ಕೊಟ್ಟರು. ಹೀಗೆ ಇಸ್ರಾಯೇಲ್ಯರು ಐಗುಪ್ತ್ಯರ ಸೊತ್ತನ್ನು ಸುಲುಕೊಂಡರು.**
**37ಇಸ್ರಾಯೇಲ್ಯರು ರಮ್ಸೇಸ್ ಪಟ್ಟಣದಿಂದ ಹೊರಟು ಸುಕ್ಕೋತಿಗೆ ಬಂದರು. ಹೆಂಗಸರೂ ಮಕ್ಕಳೂ ಅಲ್ಲದೆ ಅವರ ಕಾಲ್ಬಲವೇ ಸುಮಾರು ಆರು ಲಕ್ಷ ಗಂಡಸರು.**

ಹಾಗೆಯೇ, ಐಗುಪ್ತ್ಯರ ಎದುರಿನಲ್ಲಿ ದೈವೀಕ ದಯೆ ದೊರಕಿದ್ದರಿಂದ, ಐಗುಪ್ತ್ಯರು ಇಸ್ರಾಯೇಲ್ಯರು ಕೇಳಿದ್ದನ್ನು ಕೊಟ್ಟರು. ಹೀಗೆ, ಅವರು ಐಗುಪ್ತ್ಯರನ್ನು ಸೂರೆ ಮಾಡಿದರು. ನಿಮ್ಮ "ಮನೆಯಲ್ಲಿ ಕೆಲಸ ಮಾಡುವಾಕೆ" ನಿಮ್ಮ ಬಳಿಗೆ ಬಂದು ನಿಮ್ಮ ಎಲ್ಲಾ ಬಂಗಾರ ಮತ್ತು ಬಟ್ಟೆಗಳನ್ನು ಕೊಡು ಎಂಬದಾಗಿ ಕೇಳಿಕೊಳ್ಳುವದನ್ನು ಊಹಿಸಿಕೊಳ್ಳಿರಿ. ಆಕೆಗೆ ಹುಚ್ಚು ಹಿಡಿದದೆ ಎಂದು ನಿಮಗೆ ಅನ್ನಿಸಬಹುದು. 400 ವರ್ಷಗಳ ದಾಸತ್ವದ ನಂತರ ಇಸ್ರಾಯೇಲ್ಯರು ಐಗುಪ್ತ್ಯರೊಂದಿಗೆ ಹೀಗೆಯೇ ಕೇಳಿಕೊಂಡರು. ದೈವೀಕ ದಯೆಯ ಕ್ಷಣದಲ್ಲಿ, ಐಗುಪ್ತ್ಯರ ಕೈಗಳಿಂದ ಇಸ್ರಾಯೇಲ್ಯರ ಕೈಗಳಿಗೆ ಐಶ್ವರ್ಯವು ವರ್ಗಾವಣೆಯಾಯಿತು. ಇದೆಲ್ಲಾ ರಾತ್ರಿ ಬೆಳಗಾಗುವದರೊಳಗೆ ಸಂಭವಿಸಿತು.

ಇಂದು ದೇವರು ನಮಗೂ ಮತ್ತು ನಿಮಗೂ ಇದನ್ನು ಮಾಡುವನು ಎಂದು ನೀವು ನಂಬುತ್ತೀರೋ? ದೇವರು ನನ್ನ ಮತ್ತು ನಿಮ್ಮ ಜೀವಿತದೊಳಗೆ

ದೈವೀಕ ದಯೆಯ ಕಾಲಗಳನ್ನು ಮತ್ತು ಕ್ಷಣಗಳನ್ನು ಬರಮಾಡುತ್ತಾನೆ ಎಂದು ನೀವು ನಂಬುತ್ತೀರೋ? ದೇವರಿಂದ ಸಾಧ್ಯ ಎಂದು ನಾನು ನಂಬುತ್ತೇನೆ! ಕಾಲಗಳು ಬದಲಾಗಿವೆ. ಜನರು ಬದಲಾಗಿದ್ದಾರೆ. ಆದರೆ ನಮ್ಮ ದೇವರು ತನ್ನ ಜನರ ಮೇಲೆ ದೈವೀಕ ದಯೆಯನ್ನು ಕಳುಹಿಸಿಕೊಡುವ ದೇವರಾಗಿದ್ದಾನೆ. ಆತನು ತನ್ನ ಜನರಿಗೆ ದಯೆ ದೊರಕುವಂತೆ ಮಾಡುತ್ತಾನೆ ಮತ್ತು ಎಂದಿಗೂ ಸಂಭವಿಸದೆ ಇರುವ ಕಾರ್ಯಗಳು ಸಂಭವಿಸುವಂತೆ ಮಾಡುತ್ತಾನೆ.

# 2
# ದೇವರ ದಯೆ ನಮ್ಮ ಮೇಲೆ ಇರುವಾಗ ಏನಾಗುತ್ತದೆ?

## ಜನರ ನಡುವೆ ಪ್ರಭಾವ

ದೈವೀಕ ದಯೆಯು ನಮಗೆ ಜನರ ನಡುವೆ ಪ್ರಭಾವವನ್ನು ಕೊಡುತ್ತದೆ. ನೆಹೆಮಿಯನು "ಏನೂ ಅಲ್ಲದವನಾಗಿದ್ದನು." ಯೋಸೇಫನು ಸೆರೆಯವನಾಗಿದ್ದನು. ಇಸ್ರಾಯೇಲ್ಯರು ದಾಸರಾಗಿದ್ದರು. ಆದರೆ ದೇವರ ದಯೆ ಅವರ ಮೇಲೆ ಬಂದಾಗ, ಅವರು ಪ್ರಭಾವವನ್ನು ಸಂಪಾದಿಸಿಕೊಂಡರು. ಅವರು ಮಾತನಾಡಿದರು ಮತ್ತು ಕಾರ್ಯಗಳು ಅವರ ಪರವಾಗಿಯೇ ನಡೆದವು.

## ಜನರು, ಸ್ಥಳಗಳು, ಅಥವಾ ಕಾರ್ಯಗಳಿಗೆ ಪ್ರವೇಶ ದೊರೆಯಿತು

ದೇವರ ದಯೆ ನಮಗೆ ಜನರು, ಸ್ಥಳಗಳು, ಮತ್ತು ಕಾರ್ಯಗಳಿಗೆ ಪ್ರವೇಶವನ್ನು ಕೊಡುತ್ತದೆ. ತಕ್ಷಣ, ದೇವರು ನಮ್ಮ ಜೀವಿತಗಳ ಮೇಲೆ ದೈವೀಕ ದಯೆಯನ್ನು ಅನುಗ್ರಹಿಸುವಾಗ ಸರಿಯಾದ ಜನರು, ಸರಿಯಾದ ಸ್ಥಳಗಳು, ಕಾರ್ಯಗಳು ಅಥವಾ ಐಶ್ವರ್ಯಕ್ಕೆ ಪ್ರವೇಶವನ್ನು ಕೊಡುತ್ತಾನೆ.

## ಅಸಾಧಾರಣವಾದ ಅವಕಾಶಗಳು

ದೇವರ ದಯೆಯು ಅಸಾಧಾರಣವಾದ ಅವಕಾಶಗಳನ್ನು—ಅಂದರೆ ಇತರರಿಗೆ ಇಲ್ಲದಿರುವ ಅವಕಾಶಗಳನ್ನು—ನಮ್ಮ ಜೀವಿತಗಳೊಳಗೆ ಬರಮಾಡುತ್ತದೆ.

## ಉನ್ನತಸ್ಥಾನಗಳನ್ನು ಬರಮಾಡುತ್ತದೆ

**ಕೀರ್ತನೆಗಳು 89:17**
**ಅವರು ಹಿಗ್ಗುವ ಬಲವು ನೀನೇ.**
**ನಿನ್ನ ಕರುಣಾಕಟಾಕ್ಷದಿಂದ ನಮ್ಮ ಕೊಂಬು ಎತ್ತಲ್ಪಟ್ಟಿರುವದು.**

"ಕೊಂಬು" ಅಂದರೆ "ನಾಯಕ." ದೇವರ ದಯೆಯು ಉನ್ನತ ಸ್ಥಾನವನ್ನು ಬರಮಾಡುತ್ತದೆ.

## ಜೀವವನ್ನು ಬಿಡುಗಡೆಗೊಳಿಸುತ್ತದೆ

ದೇವರು ತನ್ನ ದಯೆಯನ್ನು ಬಿಡುಗಡೆ ಮಾಡುವಾಗ, ಸಾಯುತ್ತಿರುವಂಥದ್ದು ಕೂಡಲೇ ಬದುಕೊಳ್ಳುತ್ತದೆ. ದೇವರ ದಯೆ ನಿಮಗೆ ದೊರಕುವಾಗ ನಿಮ್ಮ ಜೀವಿತಗಳ ಪರಿಸ್ಥಿತಿಗಳು ಬದಲಾಗುತ್ತವೆ.

**ಕೀರ್ತನೆಗಳು 30:5**
**ಆತನ ಕೋಪವು ಕ್ಷಣಮಾತ್ರವೇ,**
**ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವದು;**
**ಸಂಜೆಗೆ ದುಃಖವೆಂಬದು ಬಂದು ನಮ್ಮ ಬಳಿಯಲ್ಲಿ ಇಳುಕೊಂಡರೂ**
**ಮುಂಜಾನೆ ಹರ್ಷಧ್ವನಿಯು ಕೇಳಿಸುವದು.**

**ಕೀರ್ತನೆಗಳು 30:11**
**ಆತ ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿರಿ;**
**ನಾನು ಕಟ್ಟಿಕೊಂಡಿದ್ದ ಗೋಣಿತಟ್ಟನ್ನು ತೆಗೆದುಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆಮಾಡಿಸಿದಿ.**

## 3

# ದೇವರ ದಯೆ ನಮ್ಮ ಮೇಲೆ ಬರಲು ಕಾರಣ ಏನು?

ಒಬ್ಬ ವ್ಯಕ್ತಿಯ ಮೇಲೆ ದೈವೀಕ ದಯೆಯು ಬಿಡುಗಡೆಗೊಳ್ಳಲು ಕಾರಣ ಏನು? ದೈವೀಕ ದಯೆಯು ಕೆಲವರಿಗೆ ಕೆಲವು ನಿರ್ದಿಷ್ಟವಾದ ಸಮಯಗಳಲ್ಲಿ ಯಾಕೆ ದೊರೆಯುತ್ತದೆ? ಸತ್ಯವೇದ ಅಧ್ಯಯನದಿಂದ ನನಗೆ ತಿಳಿದುಬಂದ ಕೆಲವು ಉತ್ತರಗಳನ್ನು ಇಲ್ಲಿ ಕೊಟ್ಟಿದ್ದೇನೆ.

## ದಯೆ ನಮ್ಮ ಕೆಲಸದೊಂದಿಗೆ ಸೇರಿದೆ

ದೇವರ ದಯೆ ಯಾವಾಗಲೂ ನಮ್ಮ ಕೆಲಸಗಳೊಂದಿಗೆ ಸಂಬಂಧಪಟ್ಟಿರುತ್ತದೆ. ನಮ್ಮಲ್ಲಿ ಪ್ರತಿಯೊಬ್ಬರಿಗೂ ದೇವರು ಕೆಲಸಗಳನ್ನು ಕೊಡುತ್ತಾನೆ ಮತ್ತು ಯಾವಾಗ ನಾವು ನಮಗೆ ಕೊಡಲಾಗುವ ಕೆಲಸವನ್ನು ಮಾಡಲು ಮುಂದಾಗುತ್ತೇವೆಯೋ, ಆಗ ದೇವರ ದಯೆ ನಮಗೆ ದೊರೆಯುತ್ತದೆ.

ಸತ್ಯವೇದದ ಕೆಲವು ಉದಾಹರಣೆಗಳನ್ನು ನೋಡಿಕೊಳ್ಳೋಣ.

### *ಮರಿಯಳು*

**ಲೂಕ 1:30**
**ಆ ದೂತನು ಆಕೆಗೆ – ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊರಕಿತು.**

ಮೆಸ್ಸೀಯನ ಜನನಕ್ಕಾಗಿ ದೇವರು ಯಾವ ಯೌವನಸ್ಥ ಕನ್ಯೆಯನ್ನು ಬೇಕಾದರೂ ಸಾಧನವನ್ನಾಗಿ ಆರಿಸಿಕೊಳ್ಳ ಬಹುದಾಗಿತ್ತು. ಆದರೆ ಆತನು ಮರಿಯಳನ್ನು ಆರಿಸಿಕೊಂಡನು. ಆಕೆ ನಿರ್ದಿಷ್ಟವಾದ ಕಾರ್ಯಕ್ಕಾಗಿ– ಮೆಸ್ಸೀಯನ ಜನನಕ್ಕಾಗಿ "ದಯೆಗೆ ಪಾತ್ರಳಾದಳು."

### *ಯೇಸು*

**ಲೂಕ 2:52**
**ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ**

**ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು.**

## *ನೆಹೆಮಿಯ*

ನೆಹೆಮಿಯನು ದೈವೀಕ ದಯೆಯನ್ನು ಯಾಕೆ ಅನುಭವಿಸಿದನು? ಅವನು ಯೆರೂಸಲೇಮಿನ ಗೋಡೆಗಳನ್ನು ಮರುನಿರ್ಮಾಣ ಮಾಡುವ ಕಾರ್ಯವನ್ನು ಪ್ರಾರಂಭಿಸಬೇಕೆಂದಿದ್ದನು ಆದ್ದರಿಂದಲೇ ನೆಹೆಮಿಯನು ದೈವೀಕ ದಯೆಯನ್ನು ಅನುಭವಿಸಿದನು.

## *ಯೋಸೇಫ*

ಯೋಸೇಫನಿಗೆ ದೈವೀಕ ದಯೆ ಯಾಕೆ ದೊರೆಯಿತು? ಅವನು ತನ್ನ ಕನಸಿನ ನೆರವೇರುವಿಕೆಗಾಗಿ ತನ್ನ ಜನರನ್ನು ಬಿಡುಗಡೆ ಮಾಡುಲು ಪ್ರಧಾನ ಮಂತ್ರಿಯಾಗುವ ಕಾರ್ಯದ ಕಡೆಗೆ ಸಾಗುತ್ತಿದ್ದನು.

## *ಎಸ್ತೇರಳು*

ಎಸ್ತೇರಳಿಗೆ ದೈವೀಕ ದಯೆ ದೊರೆಯಿತು ಯಾಕಂದರೆ ಯೆಹೂದ್ಯರನ್ನು ಕಾಪಾಡುವ ಕೆಲಸ ಆಕೆಗಿತ್ತು. ಎಸ್ತೇರಳು ಅನಾಥೆಯಾಗಿದ್ದಳು ಆಕೆ ಜೀವನದಲ್ಲಿ ಏನೂ ಸಾಧಿಸದೆ ಹಾಗೆಯೇ ಇದ್ದಿರಬಹುದಾಗಿತ್ತು. ಆದರೆ ದೇವರ ದಯೆ ಆಕೆಯ ಮೇಲೆ ಇತ್ತು. ಆಕೆ ಅರಸನಾದ ಅಹಷ್ವೇರೋಷನಿಗೆ ರಾಣಿಯಾಗಿ ಆಯ್ಕೆಯಾದಳು. ಮತ್ತು ಸರಿಯಾದ ಸಮಯದಲ್ಲಿ, ಎಸ್ತೇರಳು ಅರಸನ ಮುಂದೆ ಮನವಿ ಮಾಡಿಕೊಳ್ಳಲು ಹೊರಟಾಗ, ಅರಸನು ಆಕೆ ಆಸ್ಥಾನದಲ್ಲಿ ನಿಂತಿರುವದನ್ನು ನೋಡಿದನು, ಮತ್ತು ಆಕೆಗೆ ಆತನ ಎದುರಿನಲ್ಲಿ ದಯೆ ದೊರೆಯಿತು. ಆದ್ದರಿಂದ, ಅವನು ತನ್ನ ಸುವರ್ಣದಂಡವನ್ನು ಆಕೆಯ ಕಡೆಗೆ ಚಾಚಿದನು ನಂತರ ಎಸ್ತೇರಳು ಹತ್ತಿರಕ್ಕೆ ಹೋಗಿ ಸುವರ್ಣದಂಡದ ತುದಿಯನ್ನು ಮುಟ್ಟಿದಳು. ಆಗ ಅರಸನು ಆಕೆಗೆ, *"ಎಸ್ತೇರ್ ರಾಣಿಯೇ, ನಿನಗೇನು ಬೇಕು? ನಿನ್ನ ವಿಜ್ಞಾಪನೆ ಯಾವುದು? ನನ್ನ ಅರ್ಧ ರಾಜ್ಯವನ್ನು ಕೇಳಿದರೂ ನಿನಗೆ ಕೊಡುತ್ತೇನೆ ಅಂದನು!"* (ಎಸ್ತೇರಳು 5:3). ಹೀಗೆ, ದೇವರ ದಯೆ ಆಕೆಗೆ ದೊರೆಯಿತು ಯಾಕಂದರೆ ಆಕೆ ನಿರ್ದಿಷ್ಟವಾದ ಕಾರ್ಯವನ್ನು ಮಾಡುವವಳಾಗಿದ್ದಳು. ನಂತರದಲ್ಲಿ ಎಸ್ತೇರಳಿಗೆ ತಾನು ಮಾಡುವ ಕಾರ್ಯದಿಂದ ದೇವಜನರಿಗೆ ಬಿಡುಗಡೆಯಾಗುತ್ತಿದೆ ಎಂಬದು ಗೊತ್ತಾಯಿತು.

ಆದ್ದರಿಂದ, ನೀವು ಎಂದಾದರು ಯಾವುದಾದರು ಕಾರ್ಯದ ನಡುವೆ ಇರುವದಾದರೆ, ದೇವರ ದಯೆ ನಿಮ್ಮ ಮೇಲೆ ಬರುತ್ತದೆ. ಇದರ ಅರ್ಥ ಒಂದುವೇಳೆ ನಾವು ನಮ್ಮ ಸ್ವಂತ ಕೆಲಸಗಳನ್ನು ಮಾಡುತ್ತಿರುವದಾದರೆ, ಈ ದೈವೀಕ ದಯೆಯ ಕ್ಷಣಗಳನ್ನು ಹೊಂದದಂತೆ ನಮ್ಮನ್ನು ಅನರ್ಹರನ್ನಾಗಿ ಮಾಡಿಕೊಳ್ಳುತ್ತೇವೆ. ಆದರೂ, ನಾವು ದೇವರ ಕಾರ್ಯಗಳನ್ನು ಮಾಡಲು ಮುಂದಾಗುವಾಗ, ಆತನ ದೈವೀಕ ದಯೆಯನ್ನು ಹೊಂದುವ ಅಭ್ಯರ್ಥಿಗಳಾಗುತ್ತೇವೆ. ಮತ್ತು ದೇವರು ಆ ದಯೆಯನ್ನು ಬಿಡುಗಡೆಗೊಳಿಸುತ್ತಾನೆ ಯಾಕಂದರೆ ಆತನು ನಮ್ಮ ಜೀವಿತಗಳಿಗಾಗಿ ಕಾರ್ಯಗಳನ್ನು ಹೊಂದಿದ್ದು ಅವುಗಳು ನೆರವೇರಬೇಕೆಂದು ಬಯಸುತ್ತಾನೆ. ಈ ಕಾರಣದಿಂದಲೇ, ಕೆಲವೊಮ್ಮೆ, ಅನಿರೀಕ್ಷಿತವಾದ ಬಾಗಿಲುಗಳು ತೆರೆಯುತ್ತವೆ ಮತ್ತು ಇತರರಿಗೆ ಪ್ರವೇಶವಿಲ್ಲದ ಜನರು, ಸ್ಥಳಗಳು, ಮತ್ತು ಕಾರ್ಯಗಳ ಬಳಿಗೆ ನಮಗೆ ಪ್ರವೇಶ ದೊರೆಯುತ್ತದೆ. ಕೆಲವೊಮ್ಮೆ, ಐಶ್ವರ್ಯವು ನಮ್ಮ ಕೈಗಳಿಗೆ ವರ್ಗಾವಣೆಯಾಗುವದನ್ನೂ ನಾವು ನೋಡುತ್ತೇವೆ. ಇನ್ನೂ ಕೆಲವೊಮ್ಮೆ, ಜನರು ನಮ್ಮ ಪ್ರಭಾವಕ್ಕೆ ಒಳಗಾಗಿ, “ನಾವೂ ಆ ಕಾರ್ಯದಲ್ಲಿ ಭಾಗಿಯಾಗಲು ಬಯಸುತ್ತೇವೆ” ಎಂದು ಹೇಳುತ್ತಾರೆ. ಇದು ನಮ್ಮ ಜೀವಿತಗಳ ಮೇಲೆ ಸುರಿಸಲ್ಪಡುವ ದೈವೀಕ ದಯೆಯಾಗಿದೆ.

ಆದರೆ ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿರುವದು ಏನೆಂದರೆ ದೈವೀಕ ದಯೆಯ ಕ್ಷಣ ಮತ್ತು ಕಾಲವು ಮುಗಿದ ನಂತರವೂ, ನಾವು ಕೆಲಸ ಮಾಡುವದನ್ನು ಮುಂದುವರೆಸಬೇಕು ಮತ್ತು ದೇವರು ನಮಗೆ ಕೊಟ್ಟಿರುವ ಕಾರ್ಯವನ್ನು ಮುಗಿಸುವ ಕಡೆಗೆ ಸಹಜವಾಗಿಯೇ ಕಾರ್ಯಮಾಡಬೇಕು. ದೈವೀಕ ದಯೆಯ ಕ್ಷಣದಲ್ಲಿ ಅರಸನು ನೆಹೆಮಿಯನು ಕೇಳಿಕೊಂಡದ್ದೆಲ್ಲವನ್ನೂ ಅನುಗ್ರಹಿಸಿದನು. ಆದರೆ ನೆಹೆಮಿಯನು ಕಠಿಣ ಪರಿಶ್ರಮದಿಂದ ಅದನ್ನು ಮುಂದುವರೆಸಬೇಕಾಯಿತು, ಬಹಳಷ್ಟು ವಿರೋಧಗಳು, ಸುಳ್ಳು ಆರೋಪಗಳು, ಆಂತರಿಕ ಸಮಸ್ಯೆಗಳನ್ನು ಲೆಕ್ಕಿಸದೆ, ತನ್ನ ಕಾರ್ಯವನ್ನು ಮುಗಿಸಿದನು.

ದೇವರು ನಿಮ್ಮ ಜೀವಿತದ ಮೇಲೆ ಬಿಡುಗಡೆಗೊಳಿಸುವ ದಯೆಯನ್ನು ವ್ಯರ್ಥಮಾಡದಂತೆ ಎಚ್ಚರವಾಗಿರಬೇಕು. ದೇವರು ಅನುಗ್ರಹಿಸಿದ ಒಳ್ಳೆಯ ದಯೆಯನ್ನು ಸೌಲನು ಹಾಳುಮಾಡಿಕೊಂಡನು ಮತ್ತು ಕೆಲಸವನ್ನು ಪೂರ್ಣಗೊಳಿಸಲು ದೇವರಿಗೆ ಬೇರೊಬ್ಬನು (ದಾವೀದನು) ಸಿಕ್ಕಿದನು.

**1 ಸಮುವೇಲ 15:10,11,16-22**

10-11ಯೆಹೋವನು ಸಮುವೇಲನಿಗೆ – ಸೌಲನನ್ನು ಅರಸನನ್ನಾಗಿ ಮಾಡಿದ್ದಕ್ಕೆ ಈಗ ಪಶ್ಚಾತ್ತಾಪಪಡುತ್ತೇನೆ. ಅವನು ನನ್ನನ್ನು ಬಿಟ್ಟುಬಿಟ್ಟನು; ನನ್ನ ಆಜ್ಞೆಗಳನ್ನು ನೆರವೇರಿಸುವದಿಲ್ಲ ಎಂದು ಹೇಳಲು ಸಮುವೇಲನು ಕೋಪಗೊಂಡು ರಾತ್ರಿಯೆಲ್ಲಾ ಆತನಿಗೆ ಮೊರೆಯಿಟ್ಟನು.

16ಆಗ ಸಮುವೇಲನು ಅವನಿಗೆ – ಅದಿರಲಿ; ಯೆಹೋವನು ಕಳೆದ ರಾತ್ರಿಯಲ್ಲಿ ನನಗೆ ಹೇಳಿದ್ದನ್ನು ತಿಳಿಸುತ್ತೇನೆ ಕೇಳು ಎನ್ನಲು ಅವನು – ಹೇಳು ಅಂದನು.

17ಸಮುವೇಲನು – ನೀನು ನನ್ನ ದೃಷ್ಟಿಯಲ್ಲಿ ಅಲ್ಪನಾಗಿದ್ದರೂ ಯೆಹೋವನು ನಿನಗೆ ಇಸ್ರಾಯೇಲ್ಯರಲ್ಲಿ ರಾಜ್ಯಾಭಿಷೇಕಮಾಡಿದ್ದರಿಂದ ನೀನು ಎಲ್ಲಾ ಕುಲಗಳಿಗೆ ಶಿರಸ್ಸಾದಿ.

18ಆತನು ನಿನಗೆ – ಹೊರಟು ಹೋಗಿ ದುಷ್ಟರಾದ ಅಮಾಲೇಕ್ಯರೊಡನೆ ಯುದ್ಧಮಾಡಿ ಅವರೆಲ್ಲರನ್ನೂ ಸಂಪೂರ್ಣವಾಗಿ ನಾಶಮಾಡು ಎಂದು ಹೇಳಿದನು.

19ಆದರೆ ನೀನು ಯೆಹೋವನ ಮಾತನ್ನು ಕೇಳದೆ ಕೊಳ್ಳೆಗಾಗಿ ಎರಗಿ ಆತನಿಗೆ ದ್ರೋಹಮಾಡಿದ್ದೇಕೆ ಅಂದನು.

20ಆಗ ಸೌಲನು ಸಮುವೇಲನಿಗೆ – ಏನು? ನಾನು ಯೆಹೋವನ ಮಾತನ್ನು ಕೇಳಲಿಲ್ಲವೋ? ಆತನು ಕಳುಹಿಸಿದಲ್ಲಿಗೆ ಹೋಗಿ ಅಮಾಲೇಕ್ಯರನ್ನೆಲ್ಲಾ ಸಂಹರಿಸಿ ಅವರ ಅರಸನಾದ ಅಗಾಗನನ್ನು ಹಿಡಿದು ತಂದೆನು.

21ಆದರೆ ಜನರು ಸಂಪೂರ್ಣವಾಗಿ ಸಂಹರಿಸಬೇಕಾದ ಕೊಳ್ಳೆಯಲ್ಲಿ ಉತ್ತಮವಾದ ಕುರಿದನಗಳನ್ನು ನಿನ್ನ ದೇವರಾದ ಯೆಹೋವನಿಗೆ ಗಿಲ್ಗಾಲಿನಲ್ಲಿ ಯಜ್ಞಾರ್ಪಣೆಮಾಡುವದಕ್ಕಾಗಿ ಉಳಿಸಿ ತಂದರು ಎಂದು ಉತ್ತರಕೊಟ್ಟನು.

22ಅದಕ್ಕೆ ಸಮುವೇಲನು – ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷವಾಗಿದೆ ಅಂದನು.

## ದಯೆಯು ನಿಯಮಿತ ಕಾಲದೊಂದಿಗೆ ಸೇರಿದೆ

**ಕೀರ್ತನೆಗಳು 102:13**

**ನೀನು ಎದ್ದು ಚೀಯೋನನ್ನು ಕರುಣಿಸುವಿ.**
**ಅದಕ್ಕೆ ಕೃಪೆತೋರಿಸುವ ಸಮಯ ಇದೇ;**
**ನಿಯಮಿತಕಾಲವು ಬಂದದೆ.**

ನಿರ್ದಿಷ್ಟವಾದ ಕೆಲಸಕ್ಕಾಗಿ ದೇವರ ದಯೆ ನಮ್ಮ ಮೇಲೆ ಬಿಡುಗಡೆಗೊಳ್ಳುವ ನಿಯಮಿತ ಕಾಲಗಳು ನಮ್ಮ ಜೀವಿತಗಳಲ್ಲಿವೆ. ನಮ್ಮ ಜೀವಿತಗಳಲ್ಲಿ ದೈವೀಕ ದಯೆ ಬಿಡುಗಡೆಯಾಗುವ–ಸಮಯ–ಕ್ಷಣ ಇದೆ ಮತ್ತು ಏನೂ ಮಾಡದಿದ್ದರೂ ಅಂಥ ದಯೆಯನ್ನು ಅನುಭವಿಸುವದು ಹೇಗೆ ಎಂದು ನಮಗೆ ಆಶ್ಚರ್ಯವಾಗುತ್ತದೆ. ಅದುವೇ ದಯೆಯ ಕಾಲವಾಗಿದೆ! ನಮ್ಮ ಸಮಯಗಳು ಆತನ ಕೈಗಳಲ್ಲಿವೆ (ಕೀರ್ತನೆಗಳು 31:15).

ದಯೆಯ ನಿಯಮಿತ ಕಾಲಗಳ ನಡುವೆ ಸಿದ್ಧತೆಯ ಸಮಯಗಳೂ ಇದ್ದು ನಮ್ಮ ಜೀವಿತಗಳೊಳಗೆ ಬರುವ ದಯೆಯನ್ನು ನಿಭಾಯಿಸಲು ನಮ್ಮನ್ನು ಸಿದ್ಧಮಾಡುತ್ತವೆ. ಇದರೊಂದಿಗೆ, ನಮಗೆ ಕೊಡಲಾದ ಕೆಲಸದಲ್ಲಿ ನಾವು ನಂಬಿಗಸ್ತರಾಗಿರಬೇಕು ಮತ್ತು ಕೆಲಸವನ್ನು ಪೂರ್ಣಗೊಳಿಸಲು ಕೊಡಲಾಗುವ ಕೃಪೆಯೊಂದಿಗೆ ಸಹಜವಾಗಿ ಕೆಲಸ ಮಾಡುವದನ್ನು ಮುಂದುವರೆಸಬೇಕು. ನಾವು ದಯೆಯನ್ನು ಅಂಗೀಕರಿಸಿಕೊಳ್ಳುವಾಗ ಅದನ್ನು ದುರುಪಯೋಗ ಮಾಡಿಕೊಳ್ಳಬಾರದು ಆಗ ದೇವರು ನಮ್ಮ ಜೀವಿತಗಳಲ್ಲಿ ಮುಂದಿನ ಸಲ ದಯೆಯನ್ನು ಸುರಿಸುವಾಗ ನಾವು ಸಿದ್ಧರಾಗಿರುತ್ತೇವೆ.

## ದಯೆಯು ನೀತಿವಂತಿಕೆಯೊಂದಿಗೆ ಸೇರಿದೆ

**ಕೀರ್ತನೆಗಳು 5:11**
**ಯೆಹೋವನೇ ನೀತಿವಂತನನ್ನು ಆಶೀರ್ವದಿಸುವವನು ನೀನೇ;**
**ನಿನ್ನ ದಯವು ದೊಡ್ಡ ಗುರಾಣಿಯಂತೆ ಅವನನ್ನು ಆವರಿಸಿಕೊಳ್ಳುವದು.**

**ದಾನಿಯೇಲ 9:23**
**ನಿನ್ನ ವಿಜ್ಞಾಪನೆಯ ಆರಂಭದಲ್ಲಿಯೇ ದೇವರ ಅಪ್ಪಣೆಯಾಯಿತು; ಅದನ್ನು ನಿನಗೆ ತಿಳಿಸಲು ಇಲ್ಲಿಗೆ ಬಂದಿದ್ದೇನೆ; ನೀನು (ದೇವರಿಗೆ) ಅತಿಪ್ರಿಯ; ಈ ದೈವೋಕ್ತಿಯನ್ನು ಯೋಚಿಸು, ಈ ದರ್ಶನವನ್ನು ಗ್ರಹಿಸಿಕೋ.**

**ದಾನಿಯೇಲ 10:11,19**
**11ಆಗ ಅವನು ನನಗೆ – ದಾನಿಯೇಲನೇ, ಅತಿಪ್ರಿಯನೇ, ನಾನು ನುಡಿಯುವ ಮಾತುಗಳನ್ನು ಗ್ರಹಿಸು; ನಿಂತುಕೋ, ಈಗ ನಿನ್ನ ಬಳಿಗೇ ಕಳುಹಿಸಲ್ಪಟ್ಟಿದ್ದೇನೆ ಎಂದು ಹೇಳಿದನು; ಹೇಳಿದ ಕೂಡಲೆ ನಾನು ನಡುಗುತ್ತಾ ನಿಂತುಕೊಂಡೆನು.**
**19ಆಮೇಲೆ ಆ ಪುರುಷನು ನನಗೆ – ಅತಿಪ್ರಿಯನೇ, ಭಯಪಡಬೇಡ; ನಿನಗೆ ಸಮಾಧಾನವಿರಲಿ, ಬಲಗೊಳ್ಳು, ಬಲಗೊಳ್ಳು ಎಂದು ಹೇಳಿದನು. ಅವನು ಆ ಮಾತನ್ನು ಹೇಳಿದ ಕೂಡಲೆ ನಾನು ಬಲಗೊಂಡು – ಎನ್ನೊಡೆಯನೇ, ಮಾತಾಡು; ನನ್ನನ್ನು ಬಲಗೊಳಿಸಿದ್ದೀ ಎಂದರಿಕೆಮಾಡಲು…"**

ದಯೆಯು ನೀತಿವಂತಿಕೆಯೊಂದಿಗೆ ಸೇರಿದೆ. ದಾನಿಯೇಲನು ನೀತಿವಂತಿಕೆಯ ಪರ ನಿಂತ ಮನುಷ್ಯನಾಗಿ ದೊಡ್ಡ ಉದಾಹರಣೆಯಾಗಿದ್ದಾನೆ. ಆತನ ಕಷ್ಟದ ಪರಿಸ್ಥಿತಿಗಳ ನಡುವೆಯೂ ನೀತಿವಂತನಾಗಿ ಜೀವಿಸಿದನು. ದೇವರು ಅವನನ್ನು *"ಅತಿಪ್ರಿಯನು"* (ದಾನಿಯೇಲ 10:19) ಎಂದು ಕರೆದನು. ದೇವರು ನೀತಿವಂತರನ್ನು ಆಶೀರ್ವದಿಸುತ್ತಾನೆ. ಆತನು ಗುರಾಣಿಯಂತೆ ಅವರ ಸುತ್ತಲೂ ದಯೆಯನ್ನು ಇರಿಸುತ್ತಾನೆ (ಕೀರ್ತನೆಗಳು 5:11). ಆದ್ದರಿಂದ,

ನಾವು ನೀತಿವಂತರಾಗಿ ನಡೆಯುವಾಗ, ದೈವೀಕ ದಯೆಯು ನಮ್ಮನ್ನು ಸುತ್ತುವರೆಯುತ್ತದೆ. ಆದ್ದರಿಂದ, ನಮ್ಮನ್ನು ಯಾರೇ ಭೇಟಿಮಾಡಿದರೂ, ಅವರು ಕಣ್ಣಿಗೆ ಕಾಣದ–ಗುರಾಣಿಯಂತಿರುವ ಈ ದಯೆಯ ಸಂಪರ್ಕಕ್ಕೆ ಬರುತ್ತಾರೆ.

**ಜ್ಞಾನೋಕ್ತಿಗಳು 3:3,4**
**[3]ಪ್ರೀತಿಸತ್ಯತೆಗಳು ನಿನ್ನನ್ನು ಬಿಡದಿರಲಿ,**
**ಅವುಗಳನ್ನು ನಿನ್ನ ಕೊರಳಿಗೆ ಕಟ್ಟು,**
**ನಿನ್ನ ಹೃದಯದ ಹಲಗೆಯಲ್ಲಿ ಅವುಗಳನ್ನು ಬರೆ;**
**[4]ಇದರಿಂದ ನೀನು ದೇವರ ಮತ್ತು ಮನುಷ್ಯರ**
**ದಯೆಯನ್ನು ಸಮ್ಮತಿಯನ್ನೂ ಪಡೆದುಕೊಳ್ಳುವಿ.**

**ಜ್ಞಾನೋಕ್ತಿಗಳು 12:2**
**ಯೆಹೋವನು ಒಳ್ಳೆಯವನಿಗೆ ದಯೆಮಾಡುವನು;**
**ಕುಯುಕ್ತಿಯುಳ್ಳವನನ್ನು ಕೆಟ್ಟವನೆಂದು ನಿರ್ಣಯಿಸುವನು.**

ನಾವು ನಿಜವಾಗಿಯೂ ನಮ್ಮ ಹೃದಯಗಳಲ್ಲಿ ಎರಡು ಕಾರ್ಯಗಳನ್ನು ಇಟ್ಟುಕೊಳ್ಳಬೇಕೆಂದು ದೇವರು ಬಯಸುತ್ತಾನೆ.

1) ಪ್ರೀತಿ, ಇದು ಕರುಣೆಯೂ ಆಗಿದೆ, ಮತ್ತು

2) ಸತ್ಯ, ಯಥಾರ್ಥತೆ, ಸತ್ಯಸಂಧತೆ, ಮತ್ತು ಪ್ರಾಮಾಣಿಕತೆಯಾಗಿದೆ.

ದೇವರು ಹೇಳುವದು ಒಂದುವೇಳೆ ನಾವು ಈ ಎರಡು ಕಾರ್ಯಗಳನ್ನು ಬಿಡದಿದ್ದರೆ, ನಾವು ದೇವರ ಮತ್ತು ಮನುಷ್ಯರ ಎದುರಿನಲ್ಲಿ ದಯೆ ಹಾಗೂ ಸಮ್ಮತಿಯನ್ನು ಪಡೆಯುತ್ತೇವೆ. ಆದ್ದರಿಂದ, ನಾವು ಪ್ರೀತಿ ಸತ್ಯತೆಗಳುಳ್ಳವರಾಗಿ ಜೀವಿಸುವಾಗ ದಯೆ ನಮ್ಮ ಜೀವಿತಗಳ ಆಕರ್ಷಿತವಾಗುತ್ತದೆ.

## ದಯೆಯು ಜ್ಞಾನ ಮತ್ತು ತಿಳುವಳಿಕೆಯೊಂದಿಗೆ ಸೇರಿದೆ

**ಜ್ಞಾನೋಕ್ತಿಗಳು 8:35**
**ಯಾವನು ನನ್ನನ್ನು ಹೊಂದುತ್ತಾನೋ**(ವಿವೇಕ) **ಅವನು ಜೀವವನ್ನು ಹೊಂದುತ್ತಾನೆ;**
**ಯೆಹೋವನ ಕಟಾಕ್ಷಕ್ಕೆ ಗುರಿಯಾಗುವನು**

**ಜ್ಞಾನೋಕ್ತಿಗಳು 13:15**
**ಸುಬುದ್ಧಿಯು ದಯಾಸ್ಪದವು;**
**ದ್ರೋಹಿಯ ಮಾರ್ಗವು ನಾಶಕರ.**

**ಜ್ಞಾನೋಕ್ತಿಗಳು 14:35**
**ಜಾಣನಾದ ಸೇವಕನಿಗೆ ರಾಜನ ಕೃಪೆ;**
**ಮಾನಗೇಡಿಗೆ ರಾಜನ ರೌದ್ರ.**

ದಯೆಯು ಜ್ಞಾನ ಮತ್ತು ತಿಳುವಳಿಕೆಯೊಂದಿಗೆ ಸೇರಿದೆ ಯಾಕಂದರೆ, ನಾವು ಜ್ಞಾನ ಮತ್ತು ತಿಳುವಳಿಕೆಯುಳ್ಳವರಾಗಿ ಜೀವಿಸುವ ಆಯ್ಕೆಯನ್ನು ಮಾಡಿಕೊಳ್ಳುವಾಗ, ಜೀವವನ್ನು ಕಂಡುಕೊಳ್ಳುತ್ತೇವೆ ಹಾಗೂ ದಯೆಯನ್ನು ಸಂಪಾದಿಸಿಕೊಳ್ಳುತ್ತೇವೆ. ದೇವರು ನಮಗೆ ಕೊಡುವವುಗಳನ್ನು ನಾವು ಸರಿಯಾಗಿ ನಿಭಾಯಿಸುತ್ತೇವೆ ಎಂಬದು ದೇವರಿಗೆ ಗೊತ್ತಾಗುವಾಗ, ಆತನು ದಯೆಯನ್ನು ಸುರಿಸುತ್ತಾನೆ. ಆದ್ದರಿಂದ, ನಾವು ಜ್ಞಾನ ಮತ್ತು ತಿಳುವಳಿಕೆಗೆ ಬೆಲೆ ಕೊಡುವದನ್ನು ಕಲಿತುಕೊಳ್ಳಬೇಕು ಆಗ, ನಮ್ಮ ಜೀವಿತಗಳಲ್ಲಿ ದೇವರ ದಯೆಯನ್ನು ಅಂಗೀಕರಿಸಿಕೊಳ್ಳಲು ನಾವು ನಮ್ಮನ್ನು ಕ್ರಮಪಡಿಸಿಕೊಳ್ಳುತ್ತೇವೆ.

**ಕೀರ್ತನೆಗಳು 106:4**
**ಯೆಹೋವನೇ, ನನ್ನನ್ನು ನೆನಪುಮಾಡಿಕೊಂಡು ನಿನ್ನ ಪ್ರಜೆಗೆ ತೋರಿಸುವ ದಯೆಯನ್ನು ನನಗೂ ತೋರಿಸು.**
**ನನ್ನನ್ನು ರಕ್ಷಿಸಲಿಕ್ಕೆ ಬಾ,**

**ಕೀರ್ತನೆಗಳು 119:58**
**ಪೂರ್ಣಮನಸ್ಸಿನಿಂದ ನಿನ್ನ ದಯೆಯನ್ನು ಅಪೇಕ್ಷಿಸಿದ್ದೇನೆ;**
**ನಿನ್ನ ನುಡಿಗನುಸಾರವಾಗಿ ನನಗೆ ಪ್ರಸನ್ನನಾಗು.**

**ಜ್ಞಾನೋಕ್ತಿಗಳು 22:1**
**ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ;**
**ಬೆಳ್ಳಿ ಬಂಗಾರಕ್ಕಿಂತಲು ಸತ್ಕೀರ್ತಿಯು ಅಮೂಲ್ಯ.**

ನೀವು ಕೆಳಗಿನ ಕಾರ್ಯಗಳನ್ನು ಮಾಡಬೇಕೆಂದು ನಿಮ್ಮನ್ನು ಪ್ರೋತ್ಸಾಹಪಡಿಸುತ್ತೇನೆ:

- ದೈವೀಕ ದಯೆಗಾಗಿ ಪ್ರಾರ್ಥನೆ ಮಾಡಿರಿ.

- ದೈವೀಕ ದಯೆಗಾಗಿ ನಿಮ್ಮನ್ನು ಕ್ರಮಪಡಿಸಿಕೊಳ್ಳಿರಿ.
- ದೈವೀಕ ದಯೆ ಅಂಗೀಕರಿಸಿಕೊಳ್ಳುವದನ್ನು ನಿರೀಕ್ಷಿಸಿರಿ.

ಪೂರ್ಣಹೃದಯದಿಂದ ನಿಮಗೆ ದಯೆಯನ್ನು ಅನುಗ್ರಹಿಸುವಂತೆ ದೇವರನ್ನು ಬೇಡಿಕೊಳ್ಳಿರಿ ಯಾಕಂದರೆ ದೈವೀಕ ದಯೆಯ ಈ ಆರ್ಶಿವಾದವು ನಿಮ್ಮ ಜೀವಿತದಲ್ಲಿ ಅದ್ಭುತವಾದ ಕಾರ್ಯಗಳನ್ನು ಮಾಡುತ್ತದೆ. ದಯೆಯ ಕ್ಷಣಗಳಲ್ಲಿ, ದಯೆಯ ಕಾಲಗಳಲ್ಲಿ, ಹಣದಿಂದ ಖರೀದಿಸಲು ಆಗದಿರುವಂಥ ಕಾರ್ಯಗಳನ್ನು ನೀವು ಹೊಂದಬಹುದು. ಸೆರೆಮನೆಯಿಂದ ಪ್ರಧಾನ ಮಂತ್ರಿಯ ಸ್ಥಾನಕ್ಕೆ ಬರಲು ಯೋಸೇಫನು ಎಷ್ಟು ಹಣವನ್ನು ಕೊಡಬಹುದಾಗಿತ್ತು? ರಾಣಿಯಾಗಲು ಎಸ್ತೇರಳು ಎಷ್ಟು ಹಣವನ್ನು ಕೊಡಬಹುದಾಗಿತ್ತು? ನೆಹೆಮಿಯನು ತನ್ನ ಮನವಿಯೆಲ್ಲವೂ ಈಡೇರಲು ಅರಸನಿಗೆ ಎಷ್ಟು ಹಣವನ್ನು ಕೊಡಬಹುದಾಗಿತ್ತು?

ಆದರೆ ನಿಮ್ಮ ಉದ್ಯೋಗ, ವೃತ್ತಿ, ಉದ್ಯಮ, ಸೇವೆ, ಶಿಕ್ಷಣ, ಅಥವಾ ಬೇರೆ ಯಾವುದೇ ವಿಷಯದಲ್ಲಾದರೂ, ನಿಮ್ಮ ಜೀವಿತದ ಮೇಲೆ ದೇವರು ತನ್ನ ದಯೆಯನ್ನು ಬಿಡುಗಡೆ ಮಾಡುವಂತೆ ಬೇಡಿಕೊಳ್ಳಿರಿ. ನೀವು ದಯೆಗಾಗಿ ಕರ್ತನಿಗೆ ಮನವಿಮಾಡಿಕೊಳ್ಳಬಹುದು. ನಂತರ ಆ ದಯೆ ನಿಮ್ಮ ಮೇಲೆ ಸುರಿಸಲ್ಪಡುವಾಗ, ಒಂದೇ ಕ್ಷಣದಲ್ಲಿ, ಅತ್ಯದ್ಭುತವಾದ ಕಾರ್ಯಗಳು ಸಂಭವಿಸುತ್ತವೆ, ಅವಕಾಶಗಳು ತೆರೆದುಕೊಳ್ಳುತ್ತವೆ, ನಿಮ್ಮ ಪರಿಸ್ಥಿತಿಗಳು ಬದಲಾಗುತ್ತವೆ, ಮತ್ತು ಆತನು ನಿಮ್ಮ ಕಣ್ಣೀರನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡುತ್ತಾನೆ (ಕೀರ್ತನೆಗಳು 30:11).

## ಪ್ರಾರ್ಥನೆ

***ಸರ್ವಶಕ್ತನಾದ ದೇವರೇ,***

*ನಾನು ಜ್ಞಾನ ಮತ್ತು ನೀತಿವಂತಿಕೆಯುಳ್ಳವನಾಗಿ ಜೀವಿಸುತ್ತೇನೆ. ನಾನು ದೈವೀಕ ದಯೆಯನ್ನು ಅಂಗೀಕರಿಸಿ ಕೊಳ್ಳಲು ನನ್ನನ್ನು ಕ್ರಮಪಡಿಸಿಕೊಳ್ಳುತ್ತಾ ಇದ್ದೇನೆ ಮತ್ತು ದೈವೀಕ ದಯೆ ಅಂಗೀಕರಿಸಿಕೊಳ್ಳಲು ನಿರೀಕ್ಷಿಸುತ್ತೇನೆ! ಹಾಗೆಯೇ, ದಯೆಯ ನಿಯಮಿತಕಾಲಗಳ ಮಧ್ಯಂತರಗಳ ನಡುವೆ, ನಾನು ನಿನ್ನ ಕರೆಗೆ ನಂಬಿಗಸ್ತನಾಗಿ ಇರುತ್ತೇನೆ. ಕಾರ್ಯಗಳು ಕೂಡಲೇ*

*ಬದಲಾಗುವಂತೆ ನನ್ನ ಜೀವಿತದ ಮೇಲೆ ಮುಂದಿನ ನಿಯಮಿತಕಾಲದಲ್ಲಿ ನೀನು ಸುರಿಸಲಿರುವ ದಯೆಯನ್ನು ತಪ್ಪಿಸಿಕೊಳ್ಳಲು ನನಗೆ ಇಷ್ಟವಿಲ್ಲ.*

*ಯೇಸುವಿನ ನಾಮದಲ್ಲಿ, ಆಮೆನ್!*

# 4

# ದೇವರ ದಯೆಯ ಪಾರುಪತ್ಯಗಾರಿಕೆ

ದೇವರ ದಯೆಯನ್ನು ನಮ್ಮ ಮೇಲೆ ಅಂಗೀಕರಿಸಿಕೊಳ್ಳುವದು ಕೃಪೆಯ ಕಾರ್ಯವಾಗಿದೆ. ದೇವರು ನಮ್ಮ ಮೇಲೆ ದಯೆಯನ್ನು ವಿಸ್ತರಿಸುತ್ತಾನೆ, ಮತ್ತು ಅಂಗೀಕರಿಸಿಕೊಳ್ಳಲು ನಮ್ಮನ್ನು ನಾವು ಕ್ರಮಪಡಿಸಿಕೊಳ್ಳುತ್ತೇವೆ. ಆದರೂ, ಅದಾದ ನಂತರ ನಾವೇನು ಮಾಡುತ್ತೇವೆ ಎಂಬದು ಬಹಳ ಪ್ರಾಮುಖ್ಯವಾಗಿದೆ. ನಾವು ದೇವರ ದಯೆಯ ವಿಷಯದಲ್ಲಿ ಹೇಗೆ ಪಾರುಪತ್ಯಗಾರರಾಗಿದ್ದೇವೆ ಎಂಬದು ನಾನು ನಮ್ಮ ಕೆಲಸಗಳಲ್ಲಿ ಪ್ರಗತಿ ಹೊಂದುತ್ತೇವೆಯೋ ಮತ್ತು ಒಂದುವೇಳೆ ದೇವರ ಉದ್ದೇಶಗಳು ಅಂತಿಮವಾಗಿ ನೆರವೇರುತ್ತವೆಯೋ ಎಂಬದನ್ನು ದೃಢಪಡಿಸುತ್ತವೆ. ಹಾಗೆಯೇ, ದೇವರ ದಯೆಯನ್ನು ಸರಿಯಾಗಿ ಪಾರುಪತ್ಯಮಾಡುವದು ದಯೆಯ ಬಿಡುಗಡೆ ಸತತವಾಗಿ ಮುಂದುವರೆಯುತ್ತದೆಯೇ ಎಂಬದನ್ನು ದೃಢಪಡಿಸುತ್ತದೆ ಯಾಕಂದರೆ, ಆತನ ರಾಜ್ಯದಲ್ಲಿ, ಚಿಕ್ಕ ವಿಷಯಗಳಲ್ಲಿ ನಂಬಿಗಸ್ತರಾಗಿರುವದು ಇನ್ನೂ ಹೆಚ್ಚಾಗಿ ಪಡೆದುಕೊಳ್ಳುವಂತೆ ನಮ್ಮನ್ನು ಕ್ರಮಪಡಿಸುತ್ತದೆ.

ಸತ್ಯವೇದದಲ್ಲಿ, ದೈವೀಕ ದಯೆಯ ಒಳ್ಳೆ ಪಾರುಪತ್ಯಗಾರರಾಗಿರುವವರನ್ನು ನಾವು ನೋಡುತ್ತೇವೆ. ಕೆಲವು ಉದಾಹರಣೆಗಳಲ್ಲಿ ಯೋಸೇಫನು, ದೈವೀಕ ದಯೆಯನ್ನು ಅಂಗೀಕರಿಸಿಕೊಂಡು ಅನ್ಯದೇಶದಲ್ಲಿ ಪ್ರಧಾನ ಮಂತ್ರಿಯಾದರೂ, ಕರ್ತನಿಗೆ ಸತ್ಯವಂತನಾಗಿದ್ದನು, ತನ್ನ ಕೆಲಸವನ್ನು ಪೂರೈಸಿದನು, ಮತ್ತು ತನಗೆ ಕೇಡು ಮಾಡಿದ ತನ್ನ ಅಣ್ಣಂದಿರಿಗೂ ಆ ದಯೆಯನ್ನು ವಿಸ್ತರಿಸಿದನು.

ದಾವೀದನು ದೈವೀಕ ದಯೆಯನ್ನು ಅನುಭವಿಸಿದನು ಅದು ಸಾಧಾರಣ ಕುರುಬನಾಗಿದ್ದ ಅವನನ್ನು ಇಸ್ರಾಯೇಲಿನ ಶಕ್ತನಾದ ಅರಸನನ್ನಾಗಿ ಮಾಡಿತು. ಅವನು ತನ್ನ ಜೀವನದಲ್ಲಿ ತಪ್ಪುಗಳನ್ನು ಮಾಡಿದನಾದರೂ, ದಾವೀದನು ಕಡೇ ತನಕ ದೇವರ ಮೇಲೆ ಪ್ರೀತಿ ಮತ್ತು ಭಯಭಕ್ತಿಯುಳ್ಳವನಾಗಿ ಜೀವಿಸಿದನು. ಆತನು ತನ್ನ ಸುತ್ತಮುತ್ತಲಿನಲ್ಲಿದ್ದ ಜನರನ್ನು ಗೌರವಿಸಿದನು

ಮತ್ತು ದೇವರು ಅವನ ಜೀವಿತದ ಮೇಲೆ ಸುರಿಸಿದ ದಯೆಗೆ ಒಳ್ಳೆಯ ಪಾರುಪತ್ಯಗಾರನಾಗಿದ್ದಾನೆ.

ನೆಹೆಮಿಯನು ಮತ್ತೊಬ್ಬ ಅದ್ಭುತವಾದ ಉದಾಹರಣೆಯಾಗಿದ್ದಾನೆ. ಯೆರೂಸಲೇಮ್ ಪಟ್ಟಣದ ಗೋಡೆಗಳು ಮತ್ತೆ ಕಟ್ಟಲ್ಪಡುವದನ್ನು ನೋಡುವ ತನ್ನ ಕಾರ್ಯವನ್ನು ಪೂರ್ಣಗೊಳಿಸಿದ ಮತ್ತು ನಾಯಕನಾಗಿ (ಅಧಿಪತಿಯಾಗಿ) ಒಪ್ಪಿಕೊಂಡ ನಂತರವೂ, ತಾನು ಅನುಭವಿಸಬೇಕಾಗಿದ್ದ ಸೌಕರ್ಯಗಳನ್ನು ಪಡೆಯಲು ನಿರಾಕರಿಸಿದನು. ತನ್ನ ಸ್ವಂತ ಮಾತುಗಳಲ್ಲಿ, ಅವನು ಹೇಳಿರುವದೇನೆಂದರೆ, *"ಅರಸನಾದ ಅರ್ತಷಸ್ತನು ನನ್ನನ್ನು ಯೆಹೂದ ದೇಶದ ಅಧಿಪತಿಯನ್ನಾಗಿ ನೇಮಿಸಿದಂದಿನಿಂದ ಹನ್ನೆರಡು ವರುಷಗಳವರೆಗೆ ಅಂದರೆ ಅವನ ಆಳಿಕೆಯ ಇಪ್ಪತ್ತನೆಯ ವರುಷದಿಂದ ಮೂವತ್ತೆರಡನೆಯ ವರುಷದವರೆಗೆ ನಾನಾಗಲಿ ನನ್ನ ಸಹೋದರರಾಗಲಿ ದೇಶಾಧಿಪತಿಗೆ ಸಲ್ಲತಕ್ಕ ಆಯದಿಂದ ಜೀವನಮಾಡಲಿಲ್ಲ. ನನಗಿಂತ ಮುಂಚೆಯಿದ್ದ ದೇಶಾಧಿಪತಿಗಳು ಜನರು ಮೇಲೆ ಬಹಳ ಭಾರಹಾಕಿ ಅವರಿಂದ [ದಿನಕ್ಕೆ] ನಾಲ್ವತ್ತು ರೂಪಾಯಿ ಆಹಾರವನ್ನೂ ದ್ರಾಕ್ಷಾರಸವನ್ನೂ ತೆಗೆದುಕೊಂಡದ್ದಲ್ಲದೆ ಅವರ ಸೇವಕರೂ ಜನರ ಮೇಲೆ ದೊರೆತನ ನಡೆಸಿದರು. ನಾನಾದರೋ ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಇರುವದರಿಂದ ಹಾಗೆ ಮಾಡದೆ ಆ ಗೋಡೆ ಕಟ್ಟುವದರಲ್ಲಿ ನಿರತನಾಗಿದ್ದೆನು. ಪ್ರತಿದಿನ ಒಂದು ಹೋರಿ ಆರು ಕೊಬ್ಬಿದ ಕುರಿ ಕೆಲವು ಕೋಳಿಗಳು ನಮ್ಮ ಭೋಜನಕ್ಕಾಗಿ ಸಿದ್ಧವಾಗುತ್ತಿದ್ದವು. ಹತ್ತು ದಿವಸಕ್ಕೊಮ್ಮೆ ನಾನು ಎಲ್ಲಾ ತರದ ದ್ರಾಕ್ಷಾರಸವನ್ನು ಬೇಕಾಗುವಷ್ಟು ಒದಗಿಸಿಕೊಡುತ್ತಿದ್ದೆನು. ನನಗೆ ಇಷ್ಟು ವೆಚ್ಚವಾಗುತ್ತಿದ್ದರೂ ಆ ಜನರು ಮಾಡತಕ್ಕ ಕೆಲಸವು ಬಹು ಭಾರವಾಗಿದ್ದದರಿಂದ ನಾನು ದೇಶಾಧಿಪತಿಗೆ ಸಲ್ಲತಕ್ಕ ಆಯವನ್ನು ಕೇಳಲೇ ಇಲ್ಲ"* (ನೆಹೆಮಿಯ 5:14,15,18).

ಎಸ್ತೇರಳು ದೈವೀಕ ದಯೆಯನ್ನು ಅನುಭವಿಸಿದಳು ಮತ್ತು ರಾಣಿಯಾದಳು. ಮತ್ತು ಆಕೆ ಗೊತ್ತಿದ್ದರೂ ತನ್ನ ಪ್ರಾಣ ಮತ್ತು ಪ್ರಭಾವದ ಸ್ಥಾನವನ್ನು ದೇವಜನರ ಸಲುವಾಗಿ ಅಪಾಯಕ್ಕೆ ಗುರಿಮಾಡಿದಳು.

ಇದೇಪ್ರಕಾರ, ತಮ್ಮ ಜೀವಿತಗಳಲ್ಲಿ ದೇವರ ದಯೆಯ ವಿಷಯದಲ್ಲಿ ಒಳ್ಳೆಯ ಪಾರುಪತ್ಯಗಾರರಾಗಿರುವ ಇನ್ನೂ ಅನೇಕರಿದ್ದಾರೆ.

ಇದಲ್ಲದೆ, ದೇವರು ಅನುಗ್ರಹಿಸಿದ ದಯೆಯನ್ನು ದುರುಪಯೋಗಪಡಿಸಿಕೊಂಡವರನ್ನೂ ನಾವು ನೋಡುತ್ತೇವೆ. ಅರಸನಾದ ಸೊಲೊಮೋನನು-ದೇವರ ದಯೆಯ ನಿಮಿತ್ತ ಅಪಾರವಾದ ಜ್ಞಾನ, ಐಶ್ವರ್ಯ, ಪ್ರಭಾವ, ಮತ್ತು ಸಮಾಧಾನಕ್ಕೆ ಪಾತ್ರನಾದನು-ಆದರೆ ಸ್ತ್ರೀಯರ ಮೋಹದಿಂದ ದಾರಿ ತಪ್ಪಿದನು. ಇದು ಇಸ್ರಾಯೇಲಿನಲ್ಲಿನ ಮಹಿಮಾರ್ಥವಾದ ಆಳ್ವಿಕೆಯನ್ನು ಹಾಳುಮಾಡಿತು. ಅರಸನಾದ ಹಿಜ್ಕೀಯನು ಯೆಹೂದದ ಒಳ್ಳೆಯ ಅರಸನಾಗಿದ್ದು ನೀತಿವಂತಿಕೆಯ ಉಜ್ಜೀವನ ಮತ್ತು ಕರ್ತನ ಕಡೆಗೆ ಹಿಂದಿರುಗುವದನ್ನು ನೋಡಿದನು. *“ಯೆಹೋವನು ಇವನ ಸಂಗಡ ಇದ್ದದರಿಂದ ಎಲ್ಲಿಗೆ ಹೋದರೂ ಕೃತಾರ್ಥನಾಗಿ ಬರುತ್ತಿದ್ದನು”* (2 ಅರಸು 18:7a). ಇದಲ್ಲದೆ ದೇವರು ಅವನಿಗೆ ಅನುಗ್ರಹಿಸಿದ ಮಹಾ ಬಿಡುಗಡೆ ಮತ್ತು ಜಯವನ್ನು ಅನುಭವಿಸಿದನು. ಆದರೂ, ಅವನು ತನ್ನ ಆಳ್ವಿಕೆಯ ಅಂತ್ಯದಲ್ಲಿ ದೊಡ್ಡ ತಪ್ಪು ಮಾಡಿದನು. ದೇವರು ಅವನಿಗೆ ಒಪ್ಪಿಸಿದ್ದನ್ನು ಅವನು ಕಾಪಾಡಿಕೊಳ್ಳಲಿಲ್ಲ ಹಾಗೂ ಅದನ್ನು ಮುಂದಿನ ಪೀಳಿಗೆಗೆ ಆಸ್ತಿಯಾಗಿ ಒಪ್ಪಿಸಲಿಲ್ಲ. ಬದಲಾಗಿ, ಅವನು ಯೆಹೂದದ ವಿಷಯಗಳನ್ನು ಬಾಬೆಲಿನ ಅರಸನೊಂದಿಗೆ ಹಂಚಿಕೊಂಡನು ಅದರ ನಿಮಿತ್ತ ಕ್ರಮೇಣವಾಗಿ ದೇಶವನ್ನು ಬಾಬೆಲಿನವರು ವಶಪಡಿಸಿಕೊಂಡರು (2 ಅರಸು 20:12-20).

ದೇವರು ನಮ್ಮ ಜೀವಿತಗಳ ಮೇಲೆ ಬಿಡುಗಡೆ ಮಾಡುವ ದಯೆಯನ್ನು ಸರಿಯಾಗಿ ಪಾರುಪತ್ಯ ಮಾಡಲು ನಾವು ಮಾಡಬೇಕಾಗಿರುವ ಕೆಲವು ಪ್ರಮುಖ್ಯವಾದ ವಿಷಯಗಳನ್ನು ಇಲ್ಲಿ ಕೊಡಲಾಗಿದೆ.

## ದೇವರಿಗೆ ಎಲ್ಲಾ ಮಹಿಮೆಯನ್ನು ಕೊಡಬೇಕು

**ಕೀರ್ತನೆಗಳು115:1**
**ನಮ್ಮನ್ನಲ್ಲ, ಯೆಹೋವನೇ, ನಮ್ಮನ್ನಲ್ಲ,**
**ನಿನ್ನ ಪ್ರೀತಿಸತ್ಯತೆಗಳ ನಿಮಿತ್ತವಾಗಿ ನಿನ್ನ**
**ಹೆಸರನ್ನೇ ಘನಪಡಿಸು.**

ನಮ್ಮ ಜೀವಿತಗಳಲ್ಲಿ ದೇವರ ದಯೆಯನ್ನು ಹೊಂದುವವರಾಗಿ, ನಮ್ಮ ಕಣ್ಣುಗಳನ್ನು ಆತನ ಮೇಲೆ ಇಡುವದನ್ನು ಮತ್ತು ಆತನ ಕರುಣೆಯ ನಿಮಿತ್ತ ನಾವು ಹೊಂದಿರುವ ಸ್ತುತಿ, ಘನತೆ, ಮತ್ತು ಮಹಿಮೆಯನ್ನು ಸಲ್ಲಿಸುವವರಾಗಿರಬೇಕು.

## ದೈವೀಕ ದಯೆಯ ಆಶೀರ್ವಾದವನ್ನು ಹಂಚಿಕೊಳ್ಳಿರಿ

**ನೆಹೆಮಿಯ 8:10**

**ಇದಲ್ಲದೆ ಎಜ್ರನು ಅವರಿಗೆ – ಹೋಗಿ ಮೃಷ್ಟಾನ್ನವನ್ನೂ ಮಧುರಪಾನವನ್ನೂ ತೆಗೆದುಕೊಳ್ಳಿರಿ; ತಮಗೋಸ್ಕರ ಏನೂ ಸಿದ್ಧಮಾಡದವರಿಗೆ ಭಾಗಗಳನ್ನು ಕಳುಹಿಸಿರಿ. ಈ ದಿನವು ನಮ್ಮ ಕರ್ತನಿಗೆ ಪ್ರತಿಷ್ಠಿತ ದಿನವಾಗಿರುವದರಿಂದ ವ್ಯಸನಪಡಬೇಡಿರಿ; ಯೆಹೋವನ ಆನಂದವೇ ನಿಮ್ಮ ಆಶ್ರಯವಾಗಿದೆ ಅಂದನು.**

ನಾವು ನಮ್ಮ ಮೇಲಿರುವ ದೇವರ ದಯೆಯನ್ನು ಅನುಭವಿಸುವಾಗ, ಅದನ್ನು ನಮ್ಮ ಸುತ್ತಮುತ್ತಲ್ಲಿನಲ್ಲಿ ಇರುವವರೊಂದಿಗೆ ಹಂಚಿಕೊಳ್ಳಬೇಕು ಎಂಬದನ್ನು ಮರೆಯಬಾರದು. ನಮ್ಮ ಸುತ್ತಮುತ್ತಲಿನಲ್ಲಿರುವ ಕೆಲವರು ಜೀವನದ ವಿವಿಧ ಘಟ್ಟಗಳಲ್ಲಿರಬಹುದು—ಬಹುಶಃ ಕೆಲವು ಹೋರಾಟಗಳು, ಅವಶ್ಯಕತೆಗಳು, ಮತ್ತು ಸವಾಲುಗಳನ್ನು ಎದುರಿಸುತ್ತಿರಬಹುದು. ನಮ್ಮ ಜೀವಿತಗಳಲ್ಲಿರುವ ದಯೆಯನ್ನು ಅವರ ಜೀವಿತಗಳೊಳಗೆ ನಾವು ಸುರಿಸಬೇಕು. ನಾವು ಆಶೀರ್ವಾದ ನಿಧಿಗಳಾಗಿರಬೇಕೆಂದು ದೇವರು ನಮ್ಮನ್ನು ಆಶೀರ್ವದಿಸುತ್ತಾನೆ.

## ದೇವರ ದಯೆಯನ್ನು ದೂಷಿಸಬೇಡಿರಿ

ದೇವರ ದಯೆಯು ಕೇವಲ ನಮ್ಮಲ್ಲಿ ಮಾತ್ರವೇ ಯಥೇಚ್ಛವಾಗಿ ಇರಬೇಕೆಂಬ ಉದ್ದೇಶವನ್ನು ಹೊಂದಿರುವದಿಲ್ಲ. ಹಾಗೆಯೇ ದೇವರು ನಮಗೆ ಅನುಗ್ರಹಿಸುವದನ್ನು ನಾವು ದೂಷಿಸಬಾರದು ಹಾಗೆಯೇ ದುರುಪಯೋಗಪಡಿಸಲೂ ಬಾರದು. ನಮ್ಮ ಮೇಲಿರುವ ದೇವರ ದಯೆ ನಾವು ಇತರರಿಗಿಂತ ಉತ್ತಮರು ಎಂಬ ಆಲೋಚನೆಯನ್ನು ಕೊಡುವದಿಲ್ಲ. ನಮ್ಮ ಮೇಲಿರುವ ದೇವರ ದಯೆ ನಾವು ಇತರರಿಗಿಂತ ಹೆಚ್ಚು ಪ್ರೀತಿಗೆ ಪಾತ್ರರು ಎಂಬ ಆಲೋಚನೆಯನ್ನು ಕೊಡುವದಿಲ್ಲ.

## ಬೆಳೆಯುವದನ್ನು ಮುಂದುವರೆಸಿರಿ

ದಯೆಯ ಕಾಲವನ್ನು ಅನುಭವಿಸಬೇಕಾಗಿದೆಯಾದರೂ, ಅದು ದೇವರೊಂದಿಗಿನ ನಮ್ಮ ಪ್ರಯಾಣದಲ್ಲಿ "ನಿಲ್ದಾಣ ಸ್ಥಳವಾಗಿರಬಾರದು." ನಾವು ಮಹಿಮೆಯಿಂದ ಮಹಿಮೆಯನ್ನು ಹೊಂದು ಆತನ ಸಾರೂಪ್ಯಕ್ಕೆ ಮಾರ್ಪಡಬೇಕು ಎಂಬದು ದೇವರ ಬಯಕೆಯಾಗಿದೆ. ದಯೆಯ ಪ್ರತಿಯೊಂದು ಕಾಲವು ನಮ್ಮನ್ನು ದೊಡ್ಡ

ಎತ್ತರಗಳಿಗೆ ಮತ್ತು ದೇವರಲ್ಲಿನ ಅಗಾಧವಾದ ಆಳಕ್ಕೆ ನಡೆಸಬೇಕು. ಅದು ನಮ್ಮನ್ನು ಪ್ರತಿಷ್ಠೆ, ಕ್ರಮಶಿಕ್ಷಣ ಮತ್ತು ಆತನ ರಾಜ್ಯದ ನಿಮಿತ್ತ ತ್ಯಾಗ ಮಾಡುವ ಉನ್ನತ ಮಟ್ಟಕ್ಕೆ ನಮ್ಮನ್ನು ನಡೆಸಬೇಕು. ಆತನು ನನಗೆ ಹೆಚ್ಚಾಗಿ ಕೊಟ್ಟಷ್ಟೂ, ನನ್ನನ್ನು ನಾನು ಹೆಚ್ಚಾಗಿ ಯಜ್ಞವೇದಿಯ ಮೇಲೆ ಅರ್ಪಿಸಿಕೊಳ್ಳುತ್ತೇನೆ.

## ನಿಮಗೆ ಕೊಡಲಾಗಿರುವದನ್ನು ಕಾಪಾಡಿಕೊಳ್ಳಿರಿ

ದಯೆಯನ್ನು ಕಾಪಾಡಿಕೊಳ್ಳಬೇಕು. ದೇವರು ಕೊಟ್ಟಿರುವದನ್ನು ನಾವು ಸರಿಯಾಗಿ ರಕ್ಷಿಸಬೇಕು. ದೇವರು ನಮಗೆ ಕೊಟ್ಟಿರುವ ಒಳ್ಳೆಯವುಗಳನ್ನು ವಿನಾಶದ ಕಾರಣವನ್ನಾಗಿ ಬದಲಾಯಿಸಲು ಬಯಸುವಂಥ ಒಬ್ಬ ವೈರಿ ಇದ್ದಾನೆ. ಅರಸನಾದ ದಾವೀದನು ದೊಡ್ಡ ಯಶಸ್ಸನ್ನು ಅನುಭವಿಸಿದ ನಂತರ "ಸ್ವಲ್ಪ ಎಚ್ಚರ ತಪ್ಪಿದ್ದರಿಂದ" ಬತ್ಶೆಬಳೊಂದಿಗೆ ಪಾಪಕ್ಕೆ ಒಳಗಾದನು. ಆದ್ದರಿಂದ ನಮ್ಮ ಜೀವಿತಗಳ ಮೇಲೆ ಬಿಡುಗಡೆಯಾಗಿರುವ ದಯೆಯನ್ನು ಕಾಪಾಡಿಕೊಳ್ಳಲು ಯಾವಾಗಲೂ ಎಚ್ಚರವಾಗಿರಬೇಕು. ಸಹಜವಾಗಿಯೇ, ದಯೆಯು ಎಲ್ಲಾ ರೀತಿಯ ಜನರನ್ನು ನಮ್ಮ ಕಡೆಗೆ ಆಕರ್ಷಿಸುತ್ತದೆ. ಆದರೆ ಎಲ್ಲರೂ ಸರಿಯಾದ ಉದ್ದೇಶಗಳುಳ್ಳವರಾಗಿ ಬರುವದಿಲ್ಲ. ಅನೇಕರು ತಮ್ಮ ಸ್ವಾರ್ಥಪರವಾದ ಯೋಚನೆಗಳಿಂದಾಗಿ ನಮ್ಮ ಜೀವಿತಗಳ ಮೇಲಿರುವ ದಯೆಯನ್ನು ಸಾಲವಾಗಿ ಪಡೆಯುವ ಆಲೋಚನೆಯೊಂದಿಗೆ ಬರುತ್ತಾರೆ. ನೀವು ನಿಮ್ಮ ದಯೆಯ ಸಮಯದಲ್ಲಿ ಮಾಡಿಕೊಳ್ಳುವ "ಜೊತೆಗಾರಿಕೆಗಳು" ಮತ್ತು "ಸಂಬಂಧಗಳ" ವಿಷಯದಲ್ಲಿ ಎಚ್ಚರಿಕೆಯುಳ್ಳವರಾಗಿರಿ. ಎಲ್ಲವನ್ನು ಶುದ್ಧವಾಗಿಯೂ ಮತ್ತು ಪವಿತ್ರವಾಗಿಯೂ ಇಟ್ಟುಕೊಳ್ಳಿರಿ. ರಾಜಿಯಾಗಲು ನಿರಾಕರಿಸಿರಿ ಮತ್ತು ಯಾವಾಗಲೂ ಬೆಳಕಿನಲ್ಲಿ ನಡೆಯಿರಿ. ದೇವರ ವಾಕ್ಯಗಳಿಗೆ ಹೊಂದಿಕೆಯಾಗದೆ ಇರುವ ಜನರ ಹೃದಯದ ಆಲೋಚನೆಗಳು, ಜೀವನದ ಮಾದರಿಗಳು, ಅಥವಾ ಗುಣಮಟ್ಟಗಳಿಂದ ದೂರವಿರಿ.

## ಮುಂದಿನ ಪೀಳಿಗೆಗಳಿಗೆ ಇದನ್ನು ತಲುಪಿಸಿರಿ

ದಯೆಯು ಪರಂಪರೆಯಾಗಿದ್ದು ನಾವು ಅದನ್ನು ಪಾರುಪತ್ಯ ಮಾಡಬೇಕು ಮತ್ತು ಮುಂದಿನ ಪೀಳಿಗೆಗಳಿಗೆ ತಲುಪಿಸಬಹುದು. ದೇವರ ದಯೆಯ ಬಗ್ಗೆ ತಿಳಿಯಲು ಮತ್ತು ಆತನ ಒಳ್ಳೇತನದ ವಿಷಯದಲ್ಲಿ ಒಳ್ಳೆಯ ಪಾರುಪತ್ಯಗಾರರಾಗಿರುವದು ಹೇಗೆ ಎಂಬದನ್ನು ಕಲಿತುಕೊಳ್ಳಲು ಬರುವವರಿಗೆ ನಾವು ಕಲಿಸುವಾಗ, ನಾವು

ಅವರನ್ನು ಹೊಂದಿಕೊಳ್ಳಲು ಮತ್ತು ನಾವು ಅನುಭವಿಸಿರುವ ದಯೆಯನ್ನು ಅನುಭವಿಸಲು ಕ್ರಮಪಡಿಸುವವರಾಗಿದ್ದೇವೆ. ಒಂದುವೇಳೆ ನಾವು ದೈವೀಕ ದಯೆಯನ್ನು ಅನುಭವಿಸಿ, ದೈವೀಕ ದಯೆಯುಳ್ಳವರಾಗಿ ಜೀವಿಸುವದು ಅಂದರೆ ಏನು ಎಂಬದನ್ನು ಅರ್ಥಮಾಡಿಕೊಳ್ಳಲು ಮುಂದಿನ ಪೀಳಿಗೆಗಳಿಗೆ ಸಹಾಯ ಮಾಡದೆ ಹೋದರೆ, ನಮ್ಮ ಬಳಿ ಇರುವದೆಲ್ಲವೂ ವ್ಯರ್ಥವಾಗುತ್ತದೆ ಮತ್ತು ಮುದುರಿ ಹೋಗುತ್ತದೆ. ಆದರೂ, ಒಂದುವೇಳೆ ಮುಂದಿನ ಪೀಳಿಗೆಗಳಿಗೆ ದೈವೀಕ ದಯೆಯಲ್ಲಿ ಜೀವಿಸುವದು ಹೇಗೆ ಎಂಬ ವಿಷಯದಲ್ಲಿ ತರಬೇತಿಯನ್ನು ಕೊಡುವದಾದರೆ, ನಮ್ಮೊಂದಿಗೆ ಪ್ರಾರಂಭವಾದದ್ದು ಮುಂಬರುವ ಪೀಳಿಗೆಗಳಿಗಾಗಿ ಬೆಳೆಯಲು, ಅಭಿವೃದ್ಧಿಯಾಗಲು, ಮತ್ತು ದೇವರ ಉದ್ದೇಶಗಳನ್ನು ವಿಸ್ತರಿಸಲು ಸಾಧ್ಯವಾಗುತ್ತದೆ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಶಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ" ಎಂದು ಹೇಳುತ್ತದೆ* (ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ - ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***“ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ...”*** **(ಅಪೋಸ್ತಲರ ಕೃತ್ಯಗಳು 10:43).**

***“ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು”*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ*

*ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.*

*ಆಮೇನ್.*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word–The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses–Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work–Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

| | |
|---|---|
| **ಹದಿಹರೆಯದವರು** | **ವರ್ತನೆಯ ಅಸ್ತವ್ಯಸ್ತತೆಗಳು** |
| **ವಯಕ್ತಿಕ ಹೊಂದಾಣಿಕೆಗಳು** | **ವ್ಯಕ್ತಿತ್ವ ಅಸ್ತವ್ಯಸ್ತತೆಗಳು** |
| **ಸಂಭಂದಿತ ಸವಾಲುಗಳು** | **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು** |
| **ಶೈಕ್ಷಣಿಕ ಕಡಿಮೆ ಸಾಧನೆ** | **ಒತ್ತಡ / ಆಘಾತ** |
| **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು** | **ಮಧುಪಾನ / ಮಾದಕವಸ್ತು ದುರುಪಯೋಗ** |
| **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ** | **ಆತ್ಮೀಕ ಸಮಸ್ಯೆಗಳು** |
| **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು** | **ಜೀವನ ತರಬೇತಿ** |

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ: +91-80-25452617** ಅಥವಾ ಟೋಲ್ - ಫ್ರೀ (ಭಾರತದೊಳಗೆ) **1-800-300-00998**
**ಇಮೆಲ್: counselor@chrysalislife.org**

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru- 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ* ***apcwo.org/give***.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!


**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**

## DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು

**apcbiblecollege.org**

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು—ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಅನ್ ಲೈನ್** ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ದೇವರು ಪ್ರತಿಯೊಬ್ಬ ವ್ಯಕ್ತಿಯನ್ನು ಸಮಾನವಾಗಿ ಪ್ರೀತಿಸುತ್ತಾನೆ ಮತ್ತು ವ್ಯಕ್ತಿಗಳನ್ನು ಗೌರವಿಸುವವನಲ್ಲ. ಆದರೂ, ಮಾನವರೊಂದಿಗಿನ ತನ್ನ ಕಾರ್ಯಗಳಲ್ಲಿ, ದೇವರು ನಿರ್ದಿಷ್ಟವಾದ ಸಮಯದಲ್ಲಿ ಕೆಲವು ವ್ಯಕ್ತಿಗಳು ಅಥವಾ ಜನರ ಗುಂಪುಗಳ ಮೇಲೆ, ನಿರ್ದಿಷ್ಟವಾದ ಕಾಲಗಳಲ್ಲಿ, ಅಥವಾ ಅವರ ಜೀವಿತದ ಕ್ಷಣಗಳಲ್ಲಿ ದೈವೀಕ ದಯೆ ಬಿಡುಗಡೆ ಮಾಡುವದನ್ನು ನಾವು ನೋಡುತ್ತೇವೆ.

ದೈವೀಕ ದಯೆಯು ದೇವರ ದಾನವಾಗಿದ್ದು ಒಬ್ಬ ವ್ಯಕ್ತಿಗೆ ಅನುಗ್ರಹವಾಗುತ್ತದೆ ಮತ್ತು ಆ ವ್ಯಕ್ತಿಗೆ ಪ್ರಭಾವ, ಜನರು, ಸ್ಥಳಗಳು ಅಥವಾ ಕಾರ್ಯಗಳಿಗೆ ಪ್ರವೇಶ, ಅಸಾಧಾರಣವಾದ ಅವಕಾಶಗಳು, ಉನ್ನತ ಸ್ಥಾನ, ಮತ್ತು ದೈವೀಕ ಮಧ್ಯಸ್ಥಿಕೆಯನ್ನು ಕೊಡುತ್ತದೆ. ದೇವರಿಂದ ದೈವೀಕ ದಯೆ ಅಂಗೀಕರಿಸಿಕೊಳ್ಳುವದನ್ನು ನಿರೀಕ್ಷಿಸಲು ನಾವೂ ಜಾಗೃತರಾಗಬೇಕೆಂದು ನಾನು ಬಯಸುತ್ತೇನೆ.


**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org